ANANTHKUMAR PRATISHTHANA

# ಅನಂತಪಥ

ಪುಟ 2
ಶ್ರದ್ಧಾಂಜಲಿ
ನುಡಿನಮನ



ಸಂಪುಟ - 7 ಆಗಸ್ಟ್ - 2026 ಸಂಚಿಕೆ - 74

## ಒಬ್ಬ ಸಾಮಾನ್ಯ ವಿದ್ಯಾರ್ಥಿ, ಅಸಾಮಾನ್ಯ ಹೋರಾಟ: ಅನಂತಕುಮಾರ್

ಎಂಜಿನಿಯರಿಂಗ್, ವೈದ್ಯಕೀಯ ಕಾಲೇಜುಗಳಲ್ಲಿ ಮಿತಿ ಮೀರಿದ್ದ ರ‍್ಯಾಗಿಂಗ್, ಖಾಸಗಿ ಕಾಲೇಜುಗಳ ಅಧಿಕ ಶುಲ್ಕ, ಬಸ್ ಪಾಸ್ ಸೌಲಭ್ಯದ ಕೊರತೆ, ಹಾಸ್ಟೆಲ್ ಸಮಸ್ಯೆ, ಸೀಟುಗಳ ಅಭಾವ. 1970-80ರ ದಶಕದ ಕರ್ನಾಟಕದ ಕಾಲೇಜು ಕ್ಯಾಂಪಸ್‌ಗಳಲ್ಲಿ ಇವು ದಿನನಿತ್ಯದ ಸುದ್ದಿ. ಪ್ರತಿ ಕಾಲೇಜಿನಲ್ಲೂ ಒಂದಲ್ಲ ಒಂದು ಸಮಸ್ಯೆ. ಪ್ರತಿ ವಿದ್ಯಾರ್ಥಿಗೂ ಒಂದಲ್ಲ ಒಂದು ದೂರು. ಇಂತಹ ಹತ್ತಾರು ಸಮಸ್ಯೆಗಳ ನಡುವೆ ನಲುಗುತ್ತಿದ್ದ ಸಾಮಾನ್ಯ ವಿದ್ಯಾರ್ಥಿಗೆ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ (ಎಬಿವಿಪಿ) ಸಾಲಿನಲ್ಲಿ ನಿಂತ ಯುವ ಕಾರ್ಯಕರ್ತ ಅನಂತಕುಮಾರ್ ಒಂದು ಭರವಸೆಯ ಧ್ವನಿಯಾಗಿದ್ದರು. ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ (ಎಬಿವಿಪಿ) ಸಾಲಿನಲ್ಲಿ ನಿಂತು, ಒಂದೊಂದೇ ಸಮಸ್ಯೆಯನ್ನು ಬೀದಿಗೆ ತಂದು, ವಿದ್ಯಾರ್ಥಿ ಸಮುದಾಯದ ಆಕ್ರೋಶವನ್ನು ಶಿಸ್ತುಬದ್ಧ ಚಳವಳಿಯನ್ನಾಗಿ ಪರಿವರ್ತಿಸಿದ ಹೆಗ್ಗಳಿಕೆ ಅವರದು.

ಕಾಲೇಜು ಕ್ಯಾಂಪಸ್‌ನಿಂದ ಕ್ಯಾಂಪಸ್‌ಗೆ ಸುತ್ತಿ, ಪ್ರತಿ ವಿದ್ಯಾರ್ಥಿಯ ಸಮಸ್ಯೆಯನ್ನೂ ಖುದ್ದಾಗಿ ಆಲಿಸಿ, ಅದನ್ನು ಸಾಮೂಹಿಕ ಧ್ವನಿಯಾಗಿ ಪರಿವರ್ತಿಸುವ ಅವರ ಶೈಲಿ, ಆ ಕಾಲದ ಇತರ ಕಾರ್ಯಕರ್ತರಿಗಿಂತ ಅವರನ್ನು ವಿಶಿಷ್ಟವಾಗಿಸಿತ್ತು. ಶಿಕ್ಷಣ ಕ್ಷೇತ್ರದ ಇಂತಹ ಸವಾಲುಗಳು ಕಾಲಕಾಲಕ್ಕೆ ಬೇರೆ ಬೇರೆ ರೂಪದಲ್ಲಿ ಮರುಕಳಿಸುತ್ತಲೇ ಇರುತ್ತವೆ ಎಂಬುದನ್ನು ನೆನಪಿಸಿಕೊಂಡರೆ, ಅಂದು ಅವರು ಹಾಕಿಕೊಟ್ಟ ಸಂಘಟನೆಯ ಮಾದರಿ ಇಂದಿಗೂ ಎಷ್ಟು ಮೌಲ್ಯಯುತ ಎಂಬುದು ಸ್ಪಷ್ಟವಾಗುತ್ತದೆ.

ಅನಂತಕುಮಾರ್ ಸೇರಿದ್ದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತು 1948-49ರಲ್ಲಿ ಸ್ಥಾಪನೆಗೊಂಡು, ದೇಶದ ಕಾಲೇಜು-ವಿಶ್ವವಿದ್ಯಾನಿಲಯಗಳಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಗಳನ್ನು ಸಂಘಟಿಸಿ, ದೇಶಕಟ್ಟುವ ಕಾಯಕದಲ್ಲಿ ಯುವ ಪೀಳಿಗೆಯನ್ನು ತೊಡಗಿಸುವ ಪ್ರಯತ್ನಗಳಿಂದ ಆರಂಭವಾಗಿತ್ತು.



೧೯೮೦: ಶೈಕ್ಷಣಿಕ ಬೇಡಿಕೆಗಳ ಹೋರಾಟದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಿರುವ ಅನಂತಕುಮಾರ್

ರಾಜಕೀಯವನ್ನು ಮೀರಿದ ಸರ್ಕಾರೇತರ ಸಂಸ್ಥೆಯಾಗಿ ಬೆಳೆದ ಪರಿಷತ್ತು, ವಿದ್ಯಾರ್ಥಿಗಳ ಹಿತಾಸಕ್ತಿಯ ಜೊತೆಗೆ ಸಾಮಾಜಿಕ ಕಳಕಳಿಯನ್ನೂ ಬೆಸೆಯುವ ಧ್ಯೇಯ ಹೊಂದಿತ್ತು. ಇಂತಹ ಒಂದು ವೇದಿಕೆಯಲ್ಲಿ ಬೆಳೆದ ಅನಂತಕುಮಾರ್, ಪ್ರೊ. ಪಿ ವಿ ಕೃಷ್ಣ ಭಟ್ ಮೊದಲಾದ ರಾಷ್ಟ್ರೀಯ ನಾಯಕರ ಮಾರ್ಗದರ್ಶನದಲ್ಲಿ ಕರ್ನಾಟಕದ ವಿದ್ಯಾರ್ಥಿ ಆಂದೋಲನವನ್ನು ಕಟ್ಟುವ ಜವಾಬ್ದಾರಿ ಹೊತ್ತರು

ಅನಂತಕುಮಾರ್ ಅವರ ಹೋರಾಟದ ಆರಂಭ ಸಣ್ಣ ಪ್ರಮಾಣದಲ್ಲಿಯೇ ಆಗಿತ್ತು. ಹಿರಿಯ ವಿದ್ಯಾರ್ಥಿಗಳಿಂದ ಕಿರಿಯರಿಗೆ ಆಗುತ್ತಿದ್ದ ಕಿರುಕುಳದ ವಿರುದ್ಧ ಜಾಗೃತಿ ಶಿಬಿರಗಳನ್ನು ಆಯೋಜಿಸಿ, ಹೊಸ ವಿದ್ಯಾರ್ಥಿಗಳ ರಕ್ಷಣೆಗೆ ಪರಿಷತ್ತಿನ ಮೂಲಕ ವ್ಯವಸ್ಥೆ ರೂಪಿಸಿದ್ದು ಅವರ ಆರಂಭಿಕ ಕೆಲಸ.

ಪುಟ 4 ರಲ್ಲಿ ಮುಂದುವರಿದಿದೆ

## ಹಿರಿಯ ನಾಯಕ ಬಿ. ಸಿ. ನಾಗೇಶ್: ಆದರ್ಶ ಮತ್ತು ಸರಳತೆಯ ಸಾಕಾರಮೂರ್ತಿಗೆ ನುಡಿನಮನ




ರಾಷ್ಟ್ರೀಯ ಸ್ವಯಂಸೇವಕ ಸಂಘದ ತತ್ವಾದರ್ಶಗಳನ್ನು ಮೈಗೂಡಿಸಿಕೊಂಡು, ಸಾರ್ವಜನಿಕ ಜೀವನದಲ್ಲಿ ಅತ್ಯಂತ ಸರಳತೆಯಿಂದ ಬದುಕಿದ ಹಿರಿಯ ನಾಯಕ, ಮಾಜಿ ಶಿಕ್ಷಣ ಸಚಿವ ಬಿ. ಸಿ. ನಾಗೇಶ್ (ಬೆಳ್ಳೂರು ಚಂದ್ರಶೇಖರಯ್ಯ ನಾಗೇಶ್) ಅವರ ನಿಧನವು ನಾಡಿನ ರಾಜಕೀಯ ಹಾಗೂ ಸಾಂಸ್ಕೃತಿಕ ವಲಯಕ್ಕೆ ತುಂಬಲಾರದ ನಷ್ಟವಾಗಿದೆ. ಇತ್ತೀಚೆಗೆ ಅನಾರೋಗ್ಯದಿಂದ ಬಳಲುತ್ತಿದ್ದ ಅವರು, ತಮ್ಮ ೬೭ನೇ ವಯಸ್ಸಿನಲ್ಲಿ ಬೆಂಗಳೂರಿನ ಜಯನಗರದಲ್ಲಿರುವ ಪುತ್ರಿಯ ನಿವಾಸದಲ್ಲಿ ಆಗಸ್ಟ್ ೧೮ರ ಮಂಗಳವಾರದಂದು ಇಹಲೋಕ ತ್ಯಜಿಸಿದ್ದಾರೆ. ಅಧಿಕಾರ ಮತ್ತು ಅಂತಸ್ತುಗಳ ಆಚೆಗೆ ನಿಂತು, ಸೈದ್ಧಾಂತಿಕ ಬದ್ಧತೆಗೆ ಹೆಸರಾಗಿದ್ದ ಅವರ ಬದುಕು ಹಾಗೂ ಕಾರ್ಯವೈಖರಿ ಸದಾ ಸ್ಮರಣೀಯ.

೧೯೫೯ರ ಜುಲೈ ೧ರಂದು ಬಿ.ಎಸ್. ಚಂದ್ರಶೇಖರಯ್ಯ ಮತ್ತು ಸಾವಿತ್ರಮ್ಮ ದಂಪತಿಯ ಪುತ್ರನಾಗಿ ಜನಿಸಿದ ಅವರ ಬಾಲ್ಯ ಮತ್ತು ಪಿಯುಸಿ ವರೆಗಿನ ವಿದ್ಯಾಭ್ಯಾಸ ತಿಪಟೂರಿನಲ್ಲಿಯೇ ನಡೆಯಿತು. ತಿಪಟೂರಿನ ಮೈಲಾರಯ್ಯ ಛತ್ರದ ಪಕ್ಕದಲ್ಲಿಯೇ ಇದ್ದ ಅವರ ಮನೆಯ ಪರಿಸರ ಅವರ ಬದುಕಿನ ದಿಕ್ಕನ್ನೇ ರೂಪಿಸಿತು. ಆ ಛತ್ರದಲ್ಲಿ ನಡೆಯುತ್ತಿದ್ದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಶಿಬಿರಗಳು, ಸಂಘದ ಸಕ್ರಿಯ ಕಾರ್ಯಕರ್ತರಾಗಿದ್ದ ಅವರ ಮಾವಂದಿರ ಪ್ರಭಾವ ಹಾಗೂ ತಾಯಿಯವರ ಉಪದೇಶದಿಂದಾಗಿ ಅವರು ಎಳೆಯ ವಯಸ್ಸಿನಲ್ಲಿಯೇ ಸಂಘದ ಸ್ವಯಂಸೇವಕರಾದರು.

ಶ್ರೀ ಅನಂತಕುಮಾರ್ ಅವರ ಸುದೀರ್ಘ ಕಾಲದ ಅತ್ಯಾಪ್ತ ಒಡನಾಡಿಯಾಗಿದ್ದ ಬಿ. ಸಿ. ನಾಗೇಶ್ ಅವರ ಕುಟುಂಬಕ್ಕೂ, ಅನಂತಕುಮಾರ್ ಅವರ ಕುಟುಂಬಕ್ಕೂ ಮೂರು ತಲೆಮಾರುಗಳ ನಿಕಟ ಬಾಂಧವ್ಯವಿತ್ತು. ಅನಂತಕುಮಾರ್ ಅವರ ತಾಯಿ ಗಿರಿಜಾ ಶಾಸ್ತ್ರಿ ಮತ್ತು ಬಿ. ಸಿ. ನಾಗೇಶ್ ಅವರ ತಂದೆ ಒಂದೇ ತರಗತಿಯಲ್ಲಿ ಓದಿದವರಾಗಿದ್ದರು. ಈ ಕೌಟುಂಬಿಕ ಒಡನಾಟವೇ ಮುಂದೆ ವಿದ್ಯಾರ್ಥಿ ಪರಿಷತ್ತಿನ ದಿನಗಳಲ್ಲಿ ಈ ಇಬ್ಬರೂ ನಾಯಕರ ನಡುವಿನ ಗಾಢ ಸ್ನೇಹಕ್ಕೆ ಹಾಗೂ ದಶಕಗಳ ಕಾಲದ ರಾಜಕೀಯ ಒಡನಾಟಕ್ಕೆ ಭದ್ರ ಬುನಾದಿಯಾಯಿತು. ಇಂದಿರಾ ಗಾಂಧಿಯವರು ಹೇರಿದ ತುರ್ತು ಪರಿಸ್ಥಿತಿಯನ್ನು ವಿರೋಧಿಸಿ ಅನಂತಕುಮಾರರು ಹುಬ್ಬಳ್ಳಿಯಲ್ಲಿ ಜೈಲುವಾಸ ಅನುಭವಿಸಿದ ಅದೇ ಕಾಲದಲ್ಲಿ, ಬಿ. ಸಿ. ನಾಗೇಶ್ ಅವರು ಕೂಡ ಅದನ್ನು ವಿರೋಧಿಸಿ ತಮ್ಮ ವಿದ್ಯಾರ್ಥಿ ದೆಸೆಯಲ್ಲಿಯೇ ತಿಪಟೂರು ಜೈಲಿನಲ್ಲಿ ಎರಡು ದಿನಗಳ ಕಾಲ ಸೆರೆವಾಸ ಅನುಭವಿಸಿದ್ದರು.

ಪುಟ 2 ರಲ್ಲಿ ಮುಂದುವರಿದಿದೆ

ಪುಟ 1 ರಿಂದ



ಪಿಯುಸಿ ಮುಗಿಸಿದ ಮೇಲೆ ಇಂಜಿನಿಯರಿಂಗ್ ಓದಲು ಬೆಂಗಳೂರಿನ ಬಿ.ಎಂ.ಎಸ್. ಕಾಲೇಜಿಗೆ ಸೇರಿಕೊಂಡ ಅವರು, ಅಲ್ಲಿಯೂ ಸಂಘದ ಸಂಪರ್ಕ ಮುಂದುವರಿಸಿ ಶಾಖೆಯೊಂದರ ಕಾರ್ಯವಾಹರಾಗಿ ಜವಾಬ್ದಾರಿ ನಿರ್ವಹಿಸಿದರು. ಇಂಜಿನಿಯರಿಂಗ್ ಪದವೀಧರರಾಗಿದ್ದರೂ ಕೃಷಿ, ಮತ್ತು ಸಾರ್ವಜನಿಕ ಸೇವೆಯತ್ತ ಹೆಚ್ಚಿನ ಒಲವು ತೋರಿದ ಅವರು, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಮೂಲಕ ಸಂಘಟನಾ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ಪೂರ್ಣವಾಗಿ ತೊಡಗಿಸಿಕೊಂಡರು. ಬಳಿಕ ಭಾರತೀಯ ಜನತಾ ಪಕ್ಷದ ವಿವಿಧ ಜವಾಬ್ದಾರಿಗಳನ್ನು ಅತ್ಯಂತ ಶ್ರದ್ಧೆಯಿಂದ ನಿಭಾಯಿಸಿದರು. ತುಮಕೂರು ಜಿಲ್ಲೆಯ ಕಲ್ಪತರು ನಾಡು ತಿಪಟೂರಿನ ಮಣ್ಣಿನ ಮಗನಾಗಿದ್ದ ಅವರು, ೨೦೦೮ ಹಾಗೂ ೨೦೧೮ರಲ್ಲಿ ಶಾಸಕರಾಗಿ ಆಯ್ಕೆಯಾಗಿ ಕ್ಷೇತ್ರದ ಅಭಿವೃದ್ಧಿಗೆ ಅಪಾರ ಶ್ರಮ ವಹಿಸಿದರು.

ಬಸವರಾಜ ಬೊಮ್ಮಾಯಿ ಅವರ ಸಂಪುಟದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಹಾಗೂ ಸಕಾಲ ಸಚಿವರಾಗಿ ಸೇವೆ ಸಲ್ಲಿಸಿದ ಅವಧಿಯು ಅವರ ರಾಜಕೀಯ ಜೀವನದ ಪ್ರಮುಖ ಘಟ್ಟವಾಗಿದೆ. ಈ ಅವಧಿಯಲ್ಲಿ ಶಾಲಾ-ಕಾಲೇಜುಗಳಲ್ಲಿ ಸಮವಸ್ತ್ರ ನಿಯಮಾವಳಿಗಳ ಕಟ್ಟುನಿಟ್ಟಿನ ಜಾರಿ (ಹಿಜಾಬ್ ವಿಚಾರ) ಹಾಗೂ ಪಠ್ಯಪುಸ್ತಕ ಪರಿಷ್ಕರಣೆಯಂತಹ ದಿಟ್ಟ ನಿರ್ಧಾರಗಳನ್ನು ತೆಗೆದುಕೊಳ್ಳುವ ಮೂಲಕ ಅವರು ರಾಷ್ಟ್ರಮಟ್ಟದಲ್ಲಿ ಎಲ್ಲರ ಗಮನ ಸೆಳೆದರು. ಎದುರಾದ ಟೀಕೆಗಳನ್ನು ಮೆಟ್ಟಿ ನಿಂತು, ಭಾರತೀಯ ಚಿಂತನೆ ಹಾಗೂ ತಮ್ಮ ಸೈದ್ಧಾಂತಿಕ ನಿಲುವಿಗೆ ಬದ್ಧರಾಗಿ ಅವರು ಕಾರ್ಯನಿರ್ವಹಿಸಿದ ರೀತಿ ಅನನ್ಯವಾದದ್ದು.








**ಶ್ರೀ ಶ್ರೀಧರ್ ತುಮರಿ**

## ಸಾಮಾನ್ಯ ಬೊಬ್ಬೆ ಹಕ್ಕಿ / ಗಿಜಗಾರ್ಲುಹಕ್ಕಿ



ಗಾತ್ರದಲ್ಲಿ ಬುಲ್‌ಬುಲ್‌ನಷ್ಟಿರುವುದು. ಆದರೆ ಬಾಲ ಅದಕ್ಕಿಂತಲೂ ಉದ್ದವಾಗಿರುವುದು. ಸಪೂರ ಮಣ್ಣುಕಂದು ಬಣ್ಣದ ಹಕ್ಕಿ. ಮೈಯಲ್ಲಿ ದಟ್ಟವಾದ ಗೆರೆಗಳಿರುವುವು. ಉದ್ದ ಜಾಳು ಪುಕ್ಕ ಸಿಕ್ಕಿಸಿದಂತಿರುವ ಬಾಲ. ಅದರ ಕೊನೆ ಕತ್ತರಿ ಆಕಾರ. ಬಿಳಿ ಕುತ್ತಿಗೆ, ಉಳಿದ ತಳಭಾಗ ಕೆನೆ ತಿಳಿಹಳದಿ, ಇಲ್ಲವೆ ಗುಲಾಬಿ ಹಳದಿ, ಎದೆಭಾಗದ ಕಡೆ ತಿಳಿಗೆರೆ, ಹಳದಿ ಕಾಲು ಮತ್ತು ಕಪ್ಪು ಕಣ್ಣು. ಗಂಡು-ಹೆಣ್ಣುಗಳಲ್ಲಿ ವ್ಯತ್ಯಾಸವಿಲ್ಲ.

ಉಷ್ಣವಲಯದ ಕುರುಚಲು ಮತ್ತು ಬೆಟ್ಟಗಳಲ್ಲಿ ಸಾಮಾನ್ಯವಾಗಿ ಐದರಿಂದ ಇಪ್ಪತ್ತರವರೆಗೆ ಗುಂಪಿನಲ್ಲಿರುವುದು. ನೆಲದ ಮೇಲೆ ತರಗೆಲೆ ಸಂದುಗಳಲ್ಲಿರುವ ಹುಳಹುಪ್ಪಟೆ ಹೆಕ್ಕುವುದು. ಕೆಳಮಟ್ಟದ ಮಟ್ಟಿಗಳಲ್ಲಿ ಹಾರಾಡುತ್ತಿರುವುದು. ಗೂಡನ್ನು ನೆಲದ ಹತ್ತಿರ ಮಾಡುವುದು. ಅದು ಒಳ್ಳೆಯ ಹುಲ್ಲು, ನಾರು ಮತ್ತು ಬೇರು ಸೇರಿಸಿ ಬಟ್ಟಲಾಕಾರದಲ್ಲಿ ಬಹಳ ದಪ್ಪವಾಗಿ ಮತ್ತು ಅತ್ಯಂತ ಸ್ವಚ್ಛವಾಗಿರುವುದು. ಕೋಗಿಲೆ ಚಾಣ ಮತ್ತು ಚಾತಕ ಅದರ ಗೂಡನ್ನು ಪತ್ತೆ ಮಾಡಿ ಮೊಟ್ಟೆಯಿಡುವುದು ಮರೆಯುವುದಿಲ್ಲ. ಉಳಿದೆಲ್ಲಾ ಸಂತಾನೋತ್ಪತ್ತಿ ಕ್ರಮ ಕಾಡುಬೊಬ್ಬೆ ಹಕ್ಕಿಯಂತೆ ಇರುವುದು. ಬೊಬ್ಬೆ ಹಕ್ಕಿಗಳು ಕರ್ಕಶ ಕೂಗಿಗೆ ಹೆಸರುವಾಸಿ. ಅವುಗಳಿಗೆ ಹೋಲಿಸಿದರೆ ಇದರ ಕೂಗು ಮಧುರವಾಗಿರುವ ವೀಚ್.. ವೀಚ್.. ವೀಚ್.. ರೀ.. ರೀ.. ರೀ.. ರೀ....

**-ಶ್ರೀ ಶ್ರೀಧರ್ ತುಮರಿ**
**ಬರಹಗಾರರು, ಹವ್ಯಾಸಿ ಛಾಯಚಿತ್ರ ಗ್ರಾಹಕ**

ನೆನಪಿನಂಗಳದಿಂದ

## 45 ಮರೆಯಲಾಗದ ನಿಮಿಷಗಳ ರೈಲು ಪ್ರಯಾಣ

**ಡಾ. ಪ್ರತೀಕ್ ಮಾಳಿ** · ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್

ಅದು ಫೆಬ್ರವರಿ 27, 2020. ನಾನು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ರಾಜ್ಯ ಕಾರ್ಯದರ್ಶಿಯಾಗಿ ಜವಾಬ್ದಾರಿ ವಹಿಸಿಕೊಂಡು ಇನ್ನೂ ಒಂದು ತಿಂಗಳು ಕೂಡ ಪೂರ್ಣಗೊಂಡಿರಲಿಲ್ಲ. ತುಮಕೂರಿನಲ್ಲಿ ನಡೆದ ವಿವಾಹ ಕಾರ್ಯಕ್ರಮವೊಂದನ್ನು ಮುಗಿಸಿ ಧಾರವಾಡಕ್ಕೆ ಮರಳಲು ನಾನು ಮತ್ತು ಅಂದಿನ ವಿದ್ಯಾರ್ಥಿ ಪರಿಷತ್ತಿನ ರಾಜ್ಯಾಧ್ಯಕ್ಷರಾಗಿದ್ದ ಡಾ. ವೀರೇಶ್ ಬಾಳಿಕಾಯಿ ಸರ್ ಅವರು ತುಮಕೂರಿನಿಂದ ರಾಣಿ ಚೆನ್ನಮ್ಮ ಎಕ್ಸ್‌ಪ್ರೆಸ್‌ನಲ್ಲಿ ಪ್ರಯಾಣಿಸಲು ಸ್ಲೀಪರ್ ಕೋಚ್‌ನಲ್ಲಿ ನಮ್ಮ ಸೀಟುಗಳನ್ನು ಮುಂಗಡವಾಗಿ ಕಾಯ್ದಿರಿಸಿದ್ದೆವು.

ರಾತ್ರಿ ಸುಮಾರು 10:45ಕ್ಕೆ ರೈಲು ಹತ್ತಿ ನನ್ನ ರಿಸರ್ವ್ ಸೀಟ್ ಬಳಿ ಬಂದಾಗ ನನ್ನ ಸೀಟ್‌ನಲ್ಲಿ ಒಬ್ಬ ಸಾಮಾನ್ಯ ಪ್ರಯಾಣಿಕರಂತೆ ವ್ಯಕ್ತಿಯೊಬ್ಬರು ಮಲಗಿರುವುದು ಕಂಡಿತು. ಕೆಳಗಿನ ಸೀಟ್‌ನಲ್ಲಿ ಕುಟುಂಬದ ಮಹಿಳಾ ಸದಸ್ಯರೊಬ್ಬರು ಕುಳಿತಿದ್ದರು. ನಾವು ನಮ್ಮ ಸೀಟ್‌ಗಳನ್ನು ಗುರುತಿಸಿದಾಗ ಅವರು, "ಸರ್, ಇದು ನಿಮ್ಮ ಸೀಟ್ ಅಲ್ಲವೇ?" ಎಂದು ಅವರು ನಮ್ಮನ್ನು ಕೇಳಿದರು. "ಹೌದು" ಎಂದೆವು.

ತಕ್ಷಣ ಅವರು ಮೇಲಿನ ಸೀಟ್‌ನಲ್ಲಿ ಮಲಗಿದ್ದ ವ್ಯಕ್ತಿಯನ್ನು ಎಬ್ಬಿಸುತ್ತಾ, "Sorry Sir... ಒಂದೇ ನಿಮಿಷ, ಸರ್ ನಿಮ್ಮ ಸೀಟ್ ಬಿಟ್ಟು ಕೊಡುತ್ತಾರೆ" ಎಂದರು. ಆಗ ನಮಗೆ ತಿಳಿಯಿತು ಅವರು ಅಂದಿನ ತಿಪಟೂರು ಕ್ಷೇತ್ರದ ಶಾಸಕರಾಗಿದ್ದ ಶ್ರೀ ಬಿ.ಸಿ. ನಾಗೇಶ್ ಅವರು!

ಒಂದು ಕ್ಷಣ ನಿಜಕ್ಕೂ ಆಶ್ಚರ್ಯವಾಯಿತು. ತಿಪಟೂರು ಅಲ್ಲಿಂದ ತುಂಬಾ ಹತ್ತಿರವಿರುವ ನಿಲ್ದಾಣ. ಇರಲಿ ಅಮ್ಮ ಅವರು ವಿಶ್ರಾಂತಿ ಮಾಡಲಿ ಎಂದೆವು. ಆದರೆ ಆ ತಾಯಿ "ಇಲ್ಲಾ ಸರ್. ಸರ್ ನನಗೆ ಮುಂಚಿತವಾಗಿಯೇ ಹೇಳಿದ್ದಾರೆ ಈ ಸೀಟ್‌ನವರು ಬಂದ್ರೆ ತಕ್ಷಣವೇ ಎಬ್ಬಿಸಬೇಕು ಎಂದು.." ನಿಜಕ್ಕೂ ಈ ಮಾತಿನಿಂದ ನಾನು ಶಾಕ್ ಆದೆ

ಪುಟ 3ರಲ್ಲಿ ಮುಂದುವರಿದಿದೆ

# ಪರಂಪರೆಯ ನೆಲದಲ್ಲಿ ಹೊಸ ಅಧ್ಯಾಯ

**ಆರು ದಶಕಗಳ ನಂತರ IIEST ಶಿಬ್‌ಪುರದಲ್ಲಿ ಹೊಸ ವಿದ್ಯಾರ್ಥಿ ನಿಲಯ:**

**ಡಾ. ಶ್ಯಾಮ ಪ್ರಸಾದ್ ಮುಖರ್ಜಿ ಅವರ ಹೆಸರಿನ ಗೌರವ**

(ಉದ್ಘಾಟನೆ ಸಂದರ್ಭದಲ್ಲಿ ಆಡಳಿತ ಮಂಡಳಿ ಅಧ್ಯಕ್ಷೆ
ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರ ಭಾಷಣ ಸಾರಾಂಶ)




ಒಂದು ಸಂಸ್ಥೆಯ ಅತ್ಯಂತ ಹೊಸ ಹಾಸ್ಟೆಲ್‌ಗೇ ಅರವತ್ತು ವರ್ಷ ವಯಸ್ಸಾಗಿದೆ ಎಂದರೆ ನಂಬಲು ಸಾಧ್ಯವೇ? II-EST ಶಿಬ್‌ಪುರದ ವಾಸ್ತವ ಇದುವರೆಗೆ ಇದೇ ಆಗಿತ್ತು. ಇಂದಿಗೂ ಬಳಕೆಯಲ್ಲಿರುವ ಹಳೆಯ ನಿಲಯಗಳಲ್ಲಿ ಕೆಲವು ಎಂಬತ್ತರಿಂದ ನೂರು ವರ್ಷಗಳಷ್ಟು ಹಳೆಯವು. ಆಗಸ್ಟ್ 16ರಂದು ಉದ್ಘಾಟನೆಗೊಂಡ ಡಾ. ಶ್ಯಾಮ ಪ್ರಸಾದ್ ಮುಖರ್ಜಿ ಹಾಲ್, ಈ ದೀರ್ಘ ಕಾಯುವಿಕೆಗೆ ತೆರೆ ಎಳೆದಿದೆ

ಹಲವು ದಶಕಗಳಿಂದ ಇಲ್ಲಿನ ವಿದ್ಯಾರ್ಥಿಗಳು ಹಳೆಯ ಮತ್ತು ಪಾರಂಪರಿಕ ಹಾಸ್ಟೆಲ್‌ಗಳಲ್ಲಿ ವಾಸಿಸುತ್ತಿದ್ದಾರೆ. ಆ ಕಟ್ಟಡಗಳಲ್ಲಿ ಸಮಸ್ಯೆಗಳಿರಬಹುದು; ಆದರೆ ಸಾವಿರಾರು ವಿದ್ಯಾರ್ಥಿಗಳ ಭಾವನೆಗಳು, ನೆನಪುಗಳು ಮತ್ತು ಆಶೀರ್ವಾದಗಳು ಅವುಗಳಲ್ಲಿ ಅಡಕವಾಗಿವೆ.

ಐತಿಹಾಸಿಕ ಕ್ಲಾಕ್ ಟವರ್, ಗೋಥಿಕ್ ವಾಸ್ತುಶಿಲ್ಪ, ವಿದಿಶಾ ಸರೋವರ, ಪುನರುಜ್ಜೀವನಗೊಂಡ ನೀಮ್ ಝೀಲ್, ಓವಲ್ ಮತ್ತು ಲಾರ್ಡ್ಸ್ ಕ್ರಿಕೆಟ್ ಮೈದಾನಗಳು ಇವೆಲ್ಲವೂ ಸಂಸ್ಥೆಯ ಹೆಮ್ಮೆ. ಪಾರಂಪರಿಕ ಕಟ್ಟಡಗಳು ಹೆಮ್ಮೆ ನೀಡಿದರೆ, ಹೊಸ ಕಟ್ಟಡಗಳು ಭರವಸೆ ನೀಡುತ್ತವೆ; ಇನ್ನಷ್ಟು ಎತ್ತರಕ್ಕೆ ಹಾರಲು ಬೇಕಾದ ಚಲನಶಕ್ತಿಯನ್ನು ನೀಡುತ್ತವೆ. ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಭಾರತ ಸರ್ಕಾರ ಮತ್ತು ಶಿಕ್ಷಣ ಸಚಿವಾಲಯದ ಬೆಂಬಲ, ನಿರ್ದೇಶಕ ಪ್ರೊ. ವಿ. ಎಂ. ಎಸ್. ಆರ್. ಮೂರ್ತಿ ಅವರ ಮಾರ್ಗದರ್ಶನ, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ಸಹಕಾರ ಜೊತೆಗೆ BE Collegeನ ಹಳೆಯ ವಿದ್ಯಾರ್ಥಿಗಳ ಅಸಾಧಾರಣ ಬೆಂಬಲ ಈ ಪುನರುತ್ಥಾನದ ಆಧಾರಸ್ತಂಭಗಳಾಗಿವೆ.

ಸಾವಿರ ಹಾಸಿಗೆಗಳ ಈ ನಿಲಯ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವಸತಿ ಕಲ್ಪಿಸಲಿದೆ. ಅಂದಾಜು ವೆಚ್ಚ ₹130 ಕೋಟಿಯಾಗಿದ್ದರೆ, ವಾಸ್ತವಿಕ ವೆಚ್ಚ ₹115 ಕೋಟಿ ಅಂದರೆ ₹15 ಕೋಟಿಗೂ ಹೆಚ್ಚು ಉಳಿತಾಯ. ಸರ್ಕಾರಿ ನಿರ್ಮಾಣ ಯೋಜನೆಗಳಲ್ಲಿ ಇಂತಹ ಉಳಿತಾಯದ ಬಗ್ಗೆ ಕೇಳುವುದೇ ಅಪರೂಪ. ಯೋಜನೆಯನ್ನು ಕಾರ್ಯಗತಗೊಳಿಸಿದ CPWD ಮತ್ತು ಇದರಲ್ಲಿ ಭಾಗಿಯಾದ ಪ್ರತಿಯೊಬ್ಬರೂ ಶ್ರೇಯಸ್ಸಿಗೆ ಅರ್ಹರು..

ಆಧುನಿಕ ಸೌಲಭ್ಯಗಳು, ಲಿಫ್ಟ್‌ಗಳು ಮತ್ತು ಭೋಜನ ವ್ಯವಸ್ಥೆಯ ಜೊತೆಗೆ ಕಟ್ಟಡ ಸುಸ್ಥಿರತೆಯ ಬದ್ಧತೆಯನ್ನೂ ಪ್ರತಿಬಿಂಬಿಸುತ್ತದೆ. ಸಂಸ್ಕರಿಸಿದ ನೀರನ್ನು ಶೌಚಾಲಯಗಳ ಫ್ಲಷಿಂಗ್‌ಗೆ ಮರುಬಳಕೆ ಮಾಡುವ ಮೂಲಕ ಸಾವಿರಾರು ಲೀಟರ್ ಶುದ್ಧ ನೀರು ಉಳಿತಾಯವಾಗುತ್ತಿದೆ; 64-kWp ಸೌರ ವಿದ್ಯುತ್ ವ್ಯವಸ್ಥೆಯೂ ಅಳವಡಿಕೆಯಾಗಿದೆ. ಇವು IIESTಯನ್ನು ಹಸಿರು ಮತ್ತು ನೆಟ್-ಝೀರೋ ಕ್ಯಾಂಪಸ್ ಆಗಿ ರೂಪಿಸುವ ದೊಡ್ಡ ಗುರಿಯ ಭಾಗ

ಬಂಗಾಳ ಸಮಾಜ ಸುಧಾರಕರು, ಚಿಂತಕರು ಮತ್ತು ರಾಷ್ಟ್ರ ನಿರ್ಮಾತೃಗಳ ನಾಡು. ಸ್ವತಂತ್ರ ಭಾರತದ ಮಹಾನ್ ರಾಷ್ಟ್ರ ನಿರ್ಮಾತೃಗಳಲ್ಲಿ ಪ್ರಮುಖರಾದ ಡಾ. ಶ್ಯಾಮ ಪ್ರಸಾದ್ ಮುಖರ್ಜಿ ದೇಶದ ಏಕತೆಯಲ್ಲಿ ಆಳವಾದ ನಂಬಿಕೆ ಇಟ್ಟವರು. “ಏಕ್ ದೇಶ್ ಮೇ ದೋ ನಿಶಾನ್, ದೋ ವಿಧಾನ್ ಔರ್ ದೋ ಪ್ರಧಾನ್ ನಹೀಂ ಚಲೇಂಗೆ” ಎಂಬ ಅವರ ಕರೆ ಆ ನಂಬಿಕೆಯ ಪ್ರಬಲ ಅಭಿವ್ಯಕ್ತಿ. ಜಮ್ಮು ಮತ್ತು ಕಾಶ್ಮೀರವನ್ನು ಭಾರತದೊಂದಿಗೆ ಏಕೀಕರಿಸುವ ಹೋರಾಟದಲ್ಲಿ ಅವರು ಪ್ರಾಣವನ್ನೇ ಅರ್ಪಿಸಿದರು

ಆದರೆ ಅವರು ರಾಜಕೀಯ ನಾಯಕರಿಗಿಂತ ಮೊದಲು ಒಬ್ಬ ಶ್ರೇಷ್ಠ ಶಿಕ್ಷಣತಜ್ಞ. ಕಿರಿಯ ವಯಸ್ಸಿನಲ್ಲಿಯೇ ಕಲ್ಕತ್ತಾ ವಿಶ್ವವಿದ್ಯಾಲಯದ ಕುಲಪತಿಯಾದ ಅವರು, ಶಿಕ್ಷಣವು ಸಮಾಜ, ಉದ್ಯಮ ಮತ್ತು ರಾಷ್ಟ್ರ ನಿರ್ಮಾಣದ ಅಗತ್ಯಗಳಿಂದ ಪ್ರತ್ಯೇಕವಾಗಿ ಉಳಿಯಲಾರದು ಎಂಬುದನ್ನು ಅರಿತಿದ್ದರು.

ಆಡಳಿತ ಮಂಡಳಿಯ ಅಧ್ಯಕ್ಷರು ಈ ಹೆಸರಿನ ಪ್ರಸ್ತಾವನೆ ಮಂಡಿಸಿದಾಗ ಅದು ಸರ್ವಾನುಮತದಿಂದ ಅಂಗೀಕಾರಗೊಂಡಿತು. ಏಕೆಂದರೆ ಇಲ್ಲಿ ಕಟ್ಟಡವೊಂದೇ ಮುಖ್ಯವಲ್ಲ — ಅದಕ್ಕೆ ನೀಡುವ ಹೆಸರೂ ಅಷ್ಟೇ ಮುಖ್ಯ. ಹೆಸರು ಗುರುತನ್ನು ನೀಡುತ್ತದೆ, ಮೌಲ್ಯಗಳನ್ನು ಹೊತ್ತು ತರುತ್ತದೆ, ತಲೆಮಾರುಗಳಿಗೆ ಸ್ಫೂರ್ತಿ ನೀಡುತ್ತದೆ.

---

ಪುಟ 2 ರಿಂದ

ಒಬ್ಬ ಶಾಸಕರು... ಅದೂ ಆಡಳಿತಾರೂಢ ಪಕ್ಷದ ಶಾಸಕರು... ಯಾವ ಆಪ್ತ ಸಹಾಯಕರಿಲ್ಲದೆ, ಯಾವುದೇ ಆಡಂಬರವಿಲ್ಲದೆ... ಯಾವುದೇ ವಿಶೇಷ ವ್ಯವಸ್ಥೆಯಿಲ್ಲದೆ... ಸಾಮಾನ್ಯ ಪ್ರಯಾಣಿಕರಂತೆ ಸ್ಲೀಪರ್ ಕೋಚ್‌ನಲ್ಲಿ ಪ್ರಯಾಣಿಸುತ್ತಿದ್ದರು! ಆ ದೃಶ್ಯ ಸುತ್ತಮುತ್ತಲಿದ್ದ ಪ್ರಯಾಣಿಕರ ಗಮನವನ್ನೂ ಸೆಳೆಯಿತು. ಅವರ ಸರಳತೆ ಕಂಡು ಅಲ್ಲಿದ್ದ ಹಲವರು ಸಹಜವಾಗಿಯೇ ಅವರೊಂದಿಗೆ ಮಾತನಾಡಲು, ಫೋಟೋ ತೆಗೆಸಿಕೊಳ್ಳಲು ಮುಂದಾದರು. ನಮ್ಮ ಎದುರಿಗೆ ಕುಳಿತಿದ್ದ ಒಂದು ಮುಸ್ಲಿಂ ಕುಟುಂಬದ ಯುವಕ ತನ್ನ ಮನೆಯವಳಿಗೆ ಹೇಳುತ್ತಿದ್ದ ಆ ಮಾತುಗಳು ಇಂದಿಗೂ ನನ್ನ ಕಿವಿಯಲ್ಲಿ ಹಾಗೆಯೇ ಕೇಳಿಸುತ್ತವೆ:

“ದೇಖ್ ಮಾ... ಹಮ್ ಇಧರ್ MLA ಸಾಬ್ ಕೆ ಸಾಥ್ ಬೈಠೇ ಹೈ. ವೋ ಹಮಾರೆ ಸಾಥ್ ಕಿತ್ನೇ ದೇರ್ ಸೆ ಕಿತ್ನೇ ಅಚ್ಛೇ ಸೆ ಬಾತ್ ಕರ್ ರಹೇ ಥೇ... ಹಮೇ ಪತಾ ಹೀ ನಹೀಂ ಥಾ ಕಿ ವೋ MLA ಸಾಬ್ ಹೈ! ಐಸಾ ಸಚ್ಚಾ ಔರ್ ಸಿಂಪಲ್ MLA ಧರ್ತಿ ಪರ್ ಕಹಾಂ ಮಿಲತಾ ಹೈ!” (“ನೋಡು ನಾವು ಇಲ್ಲಿ MLA ಸರ್ ಅವರ ಜೊತೆ ಕುಳಿತಿದ್ದೇವೆ. ಅವರು ನಮ್ಮ ಜೊತೆ ಎಷ್ಟು ಹೊತ್ತಿನಿಂದಲೋ ಎಷ್ಟು ಚೆನ್ನಾಗಿ ಮಾತನಾಡುತ್ತಿದ್ದರು... ಅವರು MLA ಸರ್ ಅಂತ ನಮಗೆ ಗೊತ್ತೇ ಇರಲಿಲ್ಲ! ಇಷ್ಟು ಸತ್ಯವಂತರು ಸರಳವಾಗಿರುವ MLA ಈ ಭೂಮಿಯ ಮೇಲೆ ಇನ್ನೆಲ್ಲಿ ಸಿಗುತ್ತಾರೆ!”)

ಆ ಯುವಕನ ಆ ಮಾತುಗಳು ನನ್ನ ಹೃದಯದಲ್ಲಿ ಅಚ್ಚಳಿಯದೆ ಉಳಿದಿವೆ. ಏಕೆಂದರೆ ಅದು ಕೇವಲ ಒಬ್ಬ ಪ್ರಯಾಣಿಕನ ಮೆಚ್ಚುಗೆಯ ಮಾತಾಗಿರಲಿಲ್ಲ. ಒಬ್ಬ ಜನಪ್ರತಿನಿಧಿ ತನ್ನ ಸರಳತೆಯಿಂದ ಸಾಮಾನ್ಯ ಜನರ ಮನಸ್ಸಿನಲ್ಲಿ ಗಳಿಸಿಕೊಂಡ ಗೌರವದ ಅಭಿವ್ಯಕ್ತಿಯಾಗಿತ್ತು.

ಅವರು ಮನಸ್ಸು ಮಾಡಿದ್ದರೆ AC ಕೋಚ್‌ನಲ್ಲಿ ಪ್ರಯಾಣಿಸಬಹುದಿತ್ತು. ಐಷಾರಾಮಿ ಕಾರಿನಲ್ಲಿ ಸಂಚರಿಸಬಹುದಿತ್ತು. ಆದರೆ ಅವರು ಆಯ್ಕೆ ಮಾಡಿಕೊಂಡಿದ್ದು— ಸಾಮಾನ್ಯರ ಬದುಕಿನ ದಾರಿ. ಅದೇ ಅವರ ಸರಳತೆ. ಅದೇ ಅವರ ಸಹಜತೆ. ಅದೇ ಅವರ ವ್ಯಕ್ತಿತ್ವ.


ಆ ದಿನ ನನಗೆ ಒಂದು ದೊಡ್ಡ ಸತ್ಯ ಅರ್ಥವಾಯಿತು: “ನಾಯಕತ್ವವೆಂದರೆ ಅಧಿಕಾರದ ಕುರ್ಚಿಯಲ್ಲಿ ಕುಳಿತುಕೊಳ್ಳುವುದಲ್ಲ, ಜನರ ನಡುವೆ, ಜನರಂತೆಯೇ ಬದುಕುವುದಾಗಿದೆ.”
ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಪೂರ್ಣಾವಧಿ ಕಾರ್ಯಕರ್ತರಾಗಿ ಸಾರ್ವಜನಿಕ ಜೀವನ ಆರಂಭಿಸಿದ ಅವರು, ನಂತರ ಶಾಸಕರಾಗಿ ಮತ್ತು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರಾಗಿ ಸಲ್ಲಿಸಿದ ಅವರ ಸೇವೆ ಸ್ಮರಣೀಯ.

ವಿದ್ಯಾರ್ಥಿ ಪರಿಷತ್ತಿನಲ್ಲಿ ಬೆಳೆಸಿಕೊಂಡ ಸರಳತೆ, ಶಿಸ್ತು, ವೈಚಾರಿಕ ಬದ್ಧತೆ ಮತ್ತು ಸಂಘಟನಾ ಮೌಲ್ಯಗಳು ಅವರ ಸಾರ್ವಜನಿಕ ಜೀವನದಲ್ಲಿಯೂ ಸ್ಪಷ್ಟವಾಗಿ ಕಾಣುತ್ತಿದ್ದವು. ಶಿಕ್ಷಣ ಕ್ಷೇತ್ರದಲ್ಲಿ ಅವರು ಕೈಗೊಂಡ ಹಲವು ಸುಧಾರಣಾ ಕ್ರಮಗಳು ಹಾಗೂ ಅವರ ಸಂಘಟನಾ ಸಾಮರ್ಥ್ಯವೂ ಸದಾ ನೆನಪಿನಲ್ಲಿ ಉಳಿಯುವಂತಹದ್ದು.

ಮಾಜಿ ಶಿಕ್ಷಣ ಸಚಿವರು ಹಾಗೂ ತಿಪಟೂರು ಕ್ಷೇತ್ರದ ಮಾಜಿ ಶಾಸಕರಾದ ಶ್ರೀ ಬಿ.ಸಿ. ನಾಗೇಶ್ ಅವರ ಅಗಲಿಕೆ ಅತ್ಯಂತ ದುಃಖಕರ. ನನ್ನ ನೆನಪಿನಲ್ಲಿ ಅವರು ಕೇವಲ ಮಾಜಿ ಶಾಸಕರಲ್ಲ... ಒಬ್ಬ ಸರಳ, ಸಹಜ ಮತ್ತು ಸಜ್ಜನ ಜನನಾಯಕ.

# ಒಬ್ಬ ಸಾಮಾನ್ಯ ವಿದ್ಯಾರ್ಥಿ, ಅಸಾಮಾನ್ಯ ಹೋರಾಟ: ಅನಂತಕುಮಾರ್

ಪುಟ 1 ರಿಂದ



**ಸಂಘಟನಾ ಕೌಶಲ್ಯ ಮತ್ತು ಬದ್ಧತೆ**

ಇದೇ ಬದ್ಧತೆಯಿಂದ ಮುಂದುವರಿದು, ಖಾಸಗಿ ಕಾಲೇಜುಗಳ ಅಧಿಕ ಶುಲ್ಕದ ವಿರುದ್ಧ ಬಡ-ಮಧ್ಯಮ ವರ್ಗದ ವಿದ್ಯಾರ್ಥಿಗಳ ಪರವಾಗಿ ಪ್ರತಿಭಟನೆ ಸಂಘಟಿಸಿದರು. ಶುಲ್ಕ ಕಟ್ಟಲಾಗದೆ ಶಿಕ್ಷಣದಿಂದ ವಂಚಿತರಾಗುತ್ತಿದ್ದ ಎಷ್ಟೋ ವಿದ್ಯಾರ್ಥಿಗಳ ಪರವಾಗಿ ಕಾಲೇಜು ಆಡಳಿತ ಮಂಡಳಿಗಳ ಜೊತೆ ನೇರ ಮಾತುಕತೆ ನಡೆಸಿ, ಅವರ ಶಿಕ್ಷಣ ಮುಂದುವರಿಯುವಂತೆ ನೋಡಿಕೊಂಡ ಉದಾಹರಣೆಗಳೂ ಉಂಟು. ನಗರ ಬಸ್ ಸಂಚಾರ ಅವಲಂಬಿಸಿದ್ದ ಸಾವಿರಾರು ವಿದ್ಯಾರ್ಥಿಗಳ ಪರವಾಗಿ ಬಸ್ ಪಾಸ್ ವಿಸ್ತರಣೆಗಾಗಿ ನಡೆಸಿದ ಆಂದೋಲನ, ಸರ್ಕಾರಿ ಹಾಸ್ಟೆಲ್ ಸಮಸ್ಯೆ ಪರಿಹಾರಕ್ಕಾಗಿ ತಂದ ಒತ್ತಡ, ವೈದ್ಯಕೀಯ-ನರ್ಸಿಂಗ್ ಕಾಲೇಜು ಸೀಟುಗಳ ಕೊರತೆಯ ವಿರುದ್ಧ ರಾಜ್ಯಮಟ್ಟದಲ್ಲಿ ಎತ್ತಿದ ಪ್ರಶ್ನೆಗಳು — ಒಂದಾದ ಮೇಲೊಂದು ಸಮಸ್ಯೆಗೆ ಅವರು ಸಂಘಟಿತ ಉತ್ತರ ಕಂಡುಕೊಂಡರು.

**ರಾಜ್ಯಾದ್ಯಂತ ವಿಸ್ತರಣೆ ಮತ್ತು ಭ್ರಷ್ಟಾಚಾರದ ವಿರುದ್ಧ ಸಮರ**

ಪ್ರತಿಭಟನೆಗಿಂತ ಮಿಗಿಲಾಗಿ ಪರಿಹಾರದ ಹಾದಿ ಹುಡುಕುವುದು ಅನಂತಕುಮಾರ್ ಅವರ ವಿಶಿಷ್ಟತೆ. ವಿಶ್ವವಿದ್ಯಾಲಯ ಚುನಾವಣೆಗಳನ್ನು ಅಧಿಕಾರ ಸ್ಪರ್ಧೆಯನ್ನಾಗಿಸದೆ ರಚನಾತ್ಮಕ ಕೆಲಸಕ್ಕೆ ವೇದಿಕೆಯಾಗಿಸಬೇಕೆಂಬ ಚಿಂತನೆ, ಸಿಇಟಿ ಮತ್ತು ವೃತ್ತಿಶಿಕ್ಷಣ ಪರೀಕ್ಷೆಗಳ ಲೋಪದೋಷ ಸರಿಪಡಿಸುವಂತೆ ಆಗ್ರಹ, ವಿದ್ಯಾರ್ಥಿ ಸಮಸ್ಯೆಗಳನ್ನು ದಾಖಲಿಸಿ ಸರ್ಕಾರಕ್ಕೆ ಮನವರಿಕೆ ಮಾಡಿಕೊಡುವ ವ್ಯವಸ್ಥಿತ ಪ್ರಯತ್ನ — ಇವೆಲ್ಲ ಅವರ ಈ ಗುಣಕ್ಕೆ ಸಾಕ್ಷಿ. ನಗರ, ಜಿಲ್ಲಾ, ರಾಜ್ಯಮಟ್ಟದ ಅಭಿಯಾನಗಳನ್ನು ರೂಪಿಸಿ, ಟೀಮ್ ಶಿಬಿರಗಳ ಮೂಲಕ ಹೊಸ ಕಾರ್ಯಕರ್ತರನ್ನು ತಯಾರುಗೊಳಿಸಿ, ಕರಪತ್ರ ಪ್ರಚಾರದ ಮೂಲಕ ಪ್ರತಿ ಕಾಲೇಜು ಅಂಗಳವನ್ನೂ ತಲುಪುವ ಸಂಘಟನಾ ಜಾಲವನ್ನು ಅವರು ಕಟ್ಟಿದರು.

ಈ ಸಂಘಟನಾ ಕೌಶಲ್ಯದ ಹಿಂದೆ ಇದ್ದದ್ದು ಬದ್ಧತೆಯುಳ್ಳ ಕಾರ್ಯಕರ್ತರ ತಂಡವನ್ನು ಕಟ್ಟುವ ಅವರ ಸಾಮರ್ಥ್ಯ. ಪರಿಷತ್ತಿನ ಕೆಲಸಕ್ಕಾಗಿ ತಮ್ಮ ಸ್ವಂತ ಸೌಕರ್ಯಗಳನ್ನೂ ತ್ಯಜಿಸಿ, ಊಟ-ವಸತಿಯ ಪ್ರಶ್ನೆಯನ್ನೂ ಬದಿಗಿಟ್ಟು, ಪ್ರವಾಸ ಮಾಡುತ್ತಾ ಪ್ರತಿ ಕಾಲೇಜಿನಲ್ಲೂ ಪರಿಷತ್ತಿನ ಘಟಕಗಳನ್ನು ಸ್ಥಾಪಿಸುವ ಅಭ್ಯಾಸ ಅನಂತಕುಮಾರ್ ಅವರದಾಗಿತ್ತು. ಈ ನಿಟ್ಟಿನಲ್ಲಿ ಹಲವು ಪ್ರವಾಸಗಳ ಸಂದರ್ಭದಲ್ಲಿ ಅವರ ಜೊತೆ ಕುಟುಂಬದ ಸದಸ್ಯರೂ ಪಾಲ್ಗೊಂಡಿದ್ದು, ಪರಿಷತ್ತಿನ ಕೆಲಸ ಅವರ ಪಾಲಿಗೆ ಬರೀ ರಾಜಕೀಯ ಚಟುವಟಿಕೆಯಾಗಿರಲಿಲ್ಲ, ಬದಲಿಗೆ ಜೀವನಶೈಲಿಯೇ ಆಗಿತ್ತು ಎಂಬುದನ್ನು ತೋರಿಸುತ್ತದೆ. ಕಾಲೇಜಿನಿಂದ ಕಾಲೇಜಿಗೆ, ಗ್ರಾಮದಿಂದ ಗ್ರಾಮಕ್ಕೆ ಪಾದಯಾತ್ರೆ ನಡೆಸಿ ವಿದ್ಯಾರ್ಥಿಗಳನ್ನು ಭೇಟಿಯಾಗುತ್ತಿದ್ದ ಅವರ ಶೈಲಿ, ಸ್ವತಃ ನೆಲದ ಮೇಲೆ ನಿಂತು ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುವ ನಾಯಕತ್ವಕ್ಕೆ ನಿದರ್ಶನವಾಗಿತ್ತು .

ಇದೇ ಅವಧಿಯಲ್ಲಿ ಎಬಿವಿಪಿ ರಾಷ್ಟ್ರೀಯ ಮಟ್ಟದಲ್ಲಿ ವಿಸ್ತರಿಸುತ್ತಿತ್ತು. ಮುಂಬೈಯಲ್ಲಿ ನಡೆದ ರಾಷ್ಟ್ರೀಯ ಸಮ್ಮೇಳನದ ತೀರ್ಮಾನಗಳಿಂದ ಪ್ರೇರಿತರಾಗಿ, ಕರ್ನಾಟಕದಲ್ಲಿ ಪರಿಷತ್ತಿನ ಚಟುವಟಿಕೆ ಬಲಗೊಳಿಸುವ ಮತ್ತು ವಿಶ್ವವಿದ್ಯಾಲಯ ಮಟ್ಟಕ್ಕೂ ಪ್ರಭಾವ ವಿಸ್ತರಿಸುವ ಕೆಲಸದಲ್ಲಿ ಅನಂತಕುಮಾರ್ ಮುಂಚೂಣಿಯಲ್ಲಿ ನಿಂತಿದ್ದರು. ರಾಜ್ಯದ ಬೇರೆ ಬೇರೆ ಭಾಗಗಳಿಂದ ಬಂದ ಸಮಾನ ಮನಸ್ಕ ಕಾರ್ಯಕರ್ತರ ಜೊತೆ ಸೇರಿ, ಪ್ರತಿ ವಿಶ್ವವಿದ್ಯಾಲಯ ಕ್ಯಾಂಪಸ್‌ನಲ್ಲೂ ಪರಿಷತ್ತಿನ ಘಟಕ ಸ್ಥಾಪಿಸುವ ಗುರಿ ಹೊತ್ತಿದ್ದ ಈ ತಂಡ, ಕೆಲವೇ ವರ್ಷಗಳಲ್ಲಿ ಕರ್ನಾಟಕವನ್ನು ಪರಿಷತ್ತಿನ ಪ್ರಬಲ ಕೇಂದ್ರಗಳಲ್ಲಿ ಒಂದನ್ನಾಗಿ ಬೆಳೆಸಿತು.

ಕಾಲೇಜು ಪ್ರವೇಶ ಮತ್ತು ಆಡಳಿತದಲ್ಲಿ ಹಾಸುಹೊಕ್ಕಾಗಿದ್ದ ಭ್ರಷ್ಟಾಚಾರದ ವಿರುದ್ಧವೂ ಅನಂತಕುಮಾರ್ ಗಟ್ಟಿ ನಿಲುವು ತಳೆದಿದ್ದರು. ಸೀಟು ಹಂಚಿಕೆ, ಶುಲ್ಕ ಸಂಗ್ರಹ, ಪರೀಕ್ಷಾ ವ್ಯವಸ್ಥೆಯಲ್ಲಿನ ಅಕ್ರಮಗಳ ವಿರುದ್ಧ ರಾಜ್ಯಾದ್ಯಂತ ನಡೆದ ಆಂದೋಲನದಲ್ಲಿ, ಪಾರದರ್ಶಕ ಪ್ರವೇಶ ಪ್ರಕ್ರಿಯೆಗಾಗಿ ಆಗ್ರಹಿಸಿ ಅಧಿಕಾರಿಗಳ ಬಳಿ ನಿಯೋಗ ಕೊಂಡೊಯ್ಯುವ ಕೆಲಸವನ್ನೂ ಅವರು ಆಗಾಗ ಕೈಗೆತ್ತಿಕೊಳ್ಳುತ್ತಿದ್ದರು. ಸಮಸ್ಯೆಗ್ರಸ್ತ ವಿದ್ಯಾರ್ಥಿಗಳ ಪರವಾಗಿ ಸ್ವತಃ ಕಚೇರಿಗಳಿಗೆ ತೆರಳಿ, ದಾಖಲೆ ಸಮೇತ ವಾದ ಮಂಡಿಸಿ ಪರಿಹಾರ ಪಡೆಯುತ್ತಿದ್ದ ಅವರ ಶೈಲಿ, ಆ ಕಾಲದ ಅನೇಕ ಕಾಲೇಜುಗಳಲ್ಲಿ ಅನಂತಕುಮಾರ್ ಅವರಿಗೆ ವಿಶೇಷ ಗೌರವ ತಂದುಕೊಟ್ಟಿತ್ತು.

ಅಂದಿನ ದಿನಗಳಲ್ಲಿ ಸಾಮಾನ್ಯವಾಗಿ ವಿದ್ಯಾರ್ಥಿ ಚಳವಳಿಗಳಿಗೆ ಸಿಗುತ್ತಿದ್ದ ಮನ್ನಣೆ ಕಡಿಮೆಯೇ ಇತ್ತು; ಅವನ್ನು ಕೇವಲ ಗದ್ದಲದ ಚಟುವಟಿಕೆಯೆಂದೇ ಭಾವಿಸುವ ಪ್ರವೃತ್ತಿ ವ್ಯಾಪಕವಾಗಿತ್ತು. ಈ ಹಿನ್ನೆಲೆಯಲ್ಲಿ, ರಚನಾತ್ಮಕ ಆಂದೋಲನವನ್ನು ರೂಪಿಸಬಲ್ಲ ಜವಾಬ್ದಾರಿಯುತ ವಿದ್ಯಾರ್ಥಿ ನಾಯಕತ್ವ ಹೇಗಿರಬೇಕು ಎಂಬುದನ್ನು ತಮ್ಮ ಕಾರ್ಯಗಳ ಮೂಲಕ ತೋರ್ಪಡಿಸಿಕೊಟ್ಟವರಲ್ಲಿ ಅನಂತಕುಮಾರ್ ಪ್ರಮುಖರು. ಪ್ರತಿಭಟನೆಯ ಜೊತೆಜೊತೆಗೇ ಶಿಸ್ತು, ಸಂಯಮ ಮತ್ತು ಅಧ್ಯಯನದ ಮಹತ್ವವನ್ನೂ ಕಾರ್ಯಕರ್ತರಿಗೆ ಒತ್ತಿ ಹೇಳುತ್ತಿದ್ದುದು ಅವರ ವಿಶಿಷ್ಟ ಗುಣವಾಗಿತ್ತು



ಎ.ಬಿ.ವಿ.ಪಿ. ಕಾರ್ಯಕ್ರಮವೊಂದರಲ್ಲಿ ಸುತ್ತೂರು ಮಠದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ಜೊತೆ ಶ್ರೀ ಅನಂತಕುಮಾರ್
ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್

1977ರಿಂದ 1987ರವರೆಗಿನ ಈ ಒಂದು ದಶಕದಲ್ಲಿ ನಡೆದ ವಿದ್ಯಾರ್ಥಿ ಆಂದೋಲನಗಳಲ್ಲಿ ವಿಶೇಷವಾಗಿ ಜಾಲ ಸಂಘಟನೆಯ ಮೂಲಕ ಗುರುತಿಸಿಕೊಂಡ ಅನಂತಕುಮಾರ್, ಚದುರಿದ್ದ ವಿದ್ಯಾರ್ಥಿ ಚಳವಳಿಗಳಿಗೆ ಒಂದು ಶಿಸ್ತು, ಒಂದು ದಿಕ್ಕು ಕೊಟ್ಟರು. ಸಣ್ಣ ಕಾಲೇಜು ಸಮಸ್ಯೆಗಳಿಂದ ಆರಂಭವಾದ ಈ ಹೋರಾಟದ ಹಾದಿ, ಮುಂದೆ ಅವರನ್ನು ಎಬಿವಿಪಿಯ ರಾಜ್ಯ ಕಾರ್ಯದರ್ಶಿ ಹುದ್ದೆಗೆ, ಆ ಬಳಿಕ ರಾಷ್ಟ್ರೀಯ ಕಾರ್ಯದರ್ಶಿ ಸ್ಥಾನಕ್ಕೆ ಕೊಂಡೊಯ್ದಿತು. ಒಂದು ಸಾಮಾನ್ಯ ವಿದ್ಯಾರ್ಥಿಯ ಸಮಸ್ಯೆಯನ್ನು ಆಲಿಸುವುದರಿಂದ ಆರಂಭವಾದ ಈ ನಾಯಕತ್ವ ಗುಣವೇ, ಮುಂದೆ ಅನಂತಕುಮಾರ್ ಅವರನ್ನು ಕರ್ನಾಟಕ ಕಂಡ ಅಗ್ರಪಂಕ್ತಿಯ ಸಾರ್ವಜನಿಕ ನಾಯಕರಲ್ಲಿ ಒಬ್ಬರನ್ನಾಗಿ ರೂಪಿಸಿತು ಎಂಬುದನ್ನು ಇಂದು ಮರುಸ್ಮರಿಸುವುದು ಔಚಿತ್ಯಪೂರ್ಣ.

ವಿದ್ಯಾರ್ಥಿ ದೆಸೆಯಲ್ಲೇ ಸಂಘಟನೆ, ಸೇವೆ ಮತ್ತು ಬದ್ಧತೆಯ ಪಾಠ ಕಲಿತ ಅನಂತಕುಮಾರ್ ಅವರ ಈ ಆರಂಭಿಕ ಹೋರಾಟದ ವರ್ಷಗಳು, ಇಂದಿನ ಯುವ ಕಾರ್ಯಕರ್ತರಿಗೂ ಒಂದು ಮಾದರಿ. ಸಣ್ಣ ಸಮಸ್ಯೆಯ ಬಗ್ಗೆಯೂ ಗಂಭೀರವಾಗಿ ಧ್ವನಿ ಎತ್ತುವುದು, ಸಂಘಟನೆಯ ಮೂಲಕ ಆ ಧ್ವನಿಗೆ ಶಕ್ತಿ ತುಂಬುವುದು ಮತ್ತು ಪ್ರತಿಭಟನೆಯನ್ನು ರಚನಾತ್ಮಕ ಪರಿಹಾರದ ಕಡೆಗೆ ಕೊಂಡೊಯ್ಯುವುದು — ಈ ಮೂರು ಅಂಶಗಳ ಸಂಗಮವೇ ವಿದ್ಯಾರ್ಥಿ ನಾಯಕ ಅನಂತಕುಮಾರ್ ಅವರ ವ್ಯಕ್ತಿತ್ವದ ಆಶಯ.

ಇಂದು ಅನಂತಕುಮಾರ್ ಅವರನ್ನು ನೆನೆಯುವಾಗ, ಅವರ ಸಂಸದೀಯ ಸಾಧನೆಗಳಷ್ಟೇ ಅಲ್ಲ, ಅವರ ವ್ಯಕ್ತಿತ್ವಕ್ಕೆ ಬುನಾದಿ ಹಾಕಿದ ಈ ವಿದ್ಯಾರ್ಥಿ ದಿನಗಳ ಹೋರಾಟವನ್ನೂ ಸ್ಮರಿಸಬೇಕಾದುದು ಅಗತ್ಯ. ಒಂದು ಕಾಲೇಜಿನ ಸಣ್ಣ ಹಾಸ್ಟೆಲ್ ಸಮಸ್ಯೆಗೂ ಕಿವಿಗೊಡುತ್ತಿದ್ದ ಆ ಸೂಕ್ಷ್ಮತೆ, ಮುಂದೆ ಅವರು ಕೇಂದ್ರ ಸಚಿವರಾಗಿ ಔಷಧಿ ಬೆಲೆ ಇಳಿಕೆ, ಜನೌಷಧಿ ಕೇಂದ್ರಗಳ ವಿಸ್ತರಣೆಯಂತಹ ಸಾಮಾನ್ಯ ಜನರ ಬದುಕಿಗೆ ನೇರ ಸಂಬಂಧಿಸಿದ ನಿರ್ಧಾರಗಳನ್ನು ಕೈಗೊಳ್ಳುವಾಗಲೂ ಎದ್ದು ಕಾಣುತ್ತದೆ. ಒಂದು ಕಾಲೇಜಿನ ಆವರಣದಲ್ಲಿ ಆರಂಭವಾದ ಈ ಸೇವಾ ಮನೋಭಾವ, ಕೊನೆಗೆ ರಾಷ್ಟ್ರಮಟ್ಟದ ನೀತಿ ನಿರೂಪಣೆಯವರೆಗೆ ಬೆಳೆದ ಪರಿ, ಅನಂತಕುಮಾರ್ ಅವರ ಜೀವನವನ್ನು ಇಂದಿನ ಪೀಳಿಗೆಗೆ ಒಂದು ಮಾದರಿ ಪಾಠವನ್ನಾಗಿಸುತ್ತದೆ.

# ಕಾರ್ಯಕರ್ತರ ಪಡೆಯನ್ನು ಬೆಳೆಸಿದ ಅಸಾಮಾನ್ಯ ನಾಯಕ - ಬಿ .ಸಿ. ನಾಗೇಶ್

ನಾನು ಕಂಡಂತ



ಅನಂತಕುಮಾರ್



ನವದೆಹಲಿಯಲ್ಲಿ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಶ್ರೀ ಅನಂತಕುಮಾರ್ ಅವರನ್ನು ಕರ್ನಾಟಕದ ನಿಯೋಗ ಭೇಟಿಯಾದ ಸಂದರ್ಭ
ಶ್ರೀ ಬಿ.ಸಿ. ನಾಗೇಶ್, ಶ್ರೀ ಬಸವರಾಜ ಪಾಟೀಲ ಯತ್ನಾಳ, ಶ್ರೀ ಬಸವರಾಜ ಪಾಟೀಲ ಸೇಡಂ ಮತ್ತಿತರರು ಉಪಸ್ಥಿತರಿದ್ದರು

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ನಾಯಕರಾಗಿದ್ದ ಡಾ. ಎಂ ಕೆ ಶ್ರೀಧರ್ ಒಮ್ಮೆ ನಮ್ಮಕಾಲೇಜಿನ ಆವರಣದಲ್ಲಿ ನಿಂತಿದ್ದರು. ನಾನು ಕುತೂಹಲದಿಂದ ಅವರನ್ನು ಮಾತನಾಡಿಸಿದೆ. ಅವರು ನನ್ನನ್ನು ವಿದ್ಯಾರ್ಥಿ ಪರಿಷತ್ತಿನ ಸದಸ್ಯನಾಗುವಂತೆ ಆಹ್ವಾನಿಸಿದರು. ಅಲ್ಲಿಂದ ನನ್ನ ವಿದ್ಯಾರ್ಥಿ ಪರಿಷತ್ತಿನ ಚಟುವಟಿಕೆಗಳು ಪ್ರಾರಂಭವಾದವು. ಇದು ನಡೆದದ್ದು 1978 ರಲ್ಲಿ. ಇದೇ ಸಮಯದಲ್ಲಿ ಅನಂತಕುಮಾರರು ಹುಬ್ಬಳ್ಳಿಯ ಕಾಲೇಜಿನಲ್ಲಿ ಓದುತ್ತಿದ್ದರು, ವಿದ್ಯಾರ್ಥಿ ಪರಿಷತ್ತಿನಲ್ಲಿ ದೊಡ್ಡ ಹೆಸರು ಮಾಡಿದ್ದರು. ವಿದ್ಯಾರ್ಥಿ ಪರಿಷತ್ತಿನ ನಾಯಕರಾಗಿ ನನಗೆ ಅವರ ಪರಿಚಯವಾಗಿದ್ದು ಪರಿಷತ್ತಿನ ಶಿವಮೊಗ್ಗ ಸಮ್ಮೇಳನದಲ್ಲಿ. ಅಲ್ಲಿ ನಮ್ಮಿಬ್ಬರ ಕುಟುಂಬಗಳ ನಡುವಣ ಬಾಂಧವ್ಯದ ಅರಿವು ನಮಗಾಯಿತು; ನಮ್ಮಿಬ್ಬರ ನಡುವೆ ಸ್ನೇಹ ಬಾಂಧವ್ಯವೂ ಬೆಳೆಯಿತು.

1982 ರಿಂದ 1985 ರ ವರೆಗೆ ನಾನು ವಿದ್ಯಾರ್ಥಿ ಪರಿಷತ್ತಿನ ಪೂರ್ಣಾವಧಿ ಕಾರ್ಯಕರ್ತನಾಗಿ ಕೆಲಸ ಮಾಡಿದೆ. ಈ ಅವಧಿಯಲ್ಲಿ ಅನಂತಕುಮಾರರು ಮೊದಲು ರಾಜ್ಯ ಸಹಕಾರ್ಯದರ್ಶಿಯಾಗಿದ್ದು ನಂತರ ರಾಜ್ಯ ಕಾರ್ಯದರ್ಶಿಯಾಗಿ ಆಯ್ಕೆಯಾದರು. 1985 ರಲ್ಲಿ ರಾಷ್ಟ್ರೀಯ ಕಾರ್ಯದರ್ಶಿಯಾಗಿ ಆಯ್ಕೆಯಾಗಿ ಮುಂದೆ ಸಂಘದ ಆದೇಶದಂತೆ ಭಾರತೀಯ ಜನತಾ ಪಕ್ಷವನ್ನು ಸೇರುವ ವರೆಗೂ ಅದೇ ಹುದ್ದೆಯಲ್ಲಿ ಮುಂದುವರೆದರು

ಎಂಭತ್ತರ ದಶಕದಲ್ಲಿ ರಾಜ್ಯದಲ್ಲಿದ್ದ ಇತರ ವಿದ್ಯಾರ್ಥಿ ಸಂಘಟನೆಗಳಾದ ಎಸ್ಎಫ್ಐ ಮತ್ತು ಎನ್ಎಸ್ಯುಐ ನಾಮಮಾತ್ರ ಸಂಘಟನೆಗಳಾಗಿ ಉಳಿದಿದ್ದವು. ಈ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡ ಅನಂತಕುಮಾರ್ ಮತ್ತು ಸಂಗಡಿಗರು ವಿದ್ಯಾರ್ಥಿ ಪರಿಷತ್ತನ್ನು ಪ್ರಬಲವಾಗಿ ಬೆಳೆಸಿದರು. ಅನಂತಕುಮಾರರು ಸಕ್ರಿಯವಾಗಿದ್ದ ಕಾಲದಲ್ಲಿ ವಿದ್ಯಾರ್ಥಿ ಪರಿಷತ್ತು ಹಲವಾರು ಕಾರ್ಯಕ್ರಮಗಳನ್ನು ನಿರಂತರವಾಗಿ ಸಂಘಟಿಸುತ್ತಿತ್ತು. ಬೆಂಗಳೂರಿಗೆ ಬಂದಾಗ ಸಮಯ ವ್ಯರ್ಥ ಮಾಡದೆ ಮುಖ್ಯಮಂತ್ರಿಗಳು, ಪತ್ರಕರ್ತರು ಸೇರಿದಂತೆ ಪ್ರಭಾವಿ ವ್ಯಕ್ತಿಗಳನ್ನು ಭೇಟಿಯಾಗುತ್ತಿದ್ದರು.

ಆ ಕಾಲದಲ್ಲಿ ಪರಿಷತ್ತಿನ ಕಾರ್ಯಾಲಯ ಅರಳೇಪೇಟೆಯಲ್ಲಿತ್ತು. ಎರಡು ಪುಟ್ಟ ಕೋಣೆ, ಒಂದು ಚಿಕ್ಕ ಅಡುಗೆ ಮನೆ — ಅಷ್ಟೇ ಜಾಗದಲ್ಲಿ ನಾವು ಹತ್ತು ಹನ್ನೆರಡು ಪೂರ್ಣಾವಧಿ ಕಾರ್ಯಕರ್ತರು ಮಲಗುತ್ತಿದ್ದೆವು. ಅನಂತಕುಮಾರರೂ ಬೆಂಗಳೂರಿಗೆ ಬಂದಾಗ ನಮ್ಮ ಜೊತೆಯಲ್ಲಿಯೇ ಇರುತ್ತಿದ್ದರು. ಕೆಲಸವಿಲ್ಲದಿದ್ದರೆ ಅವರು ಏಳುವುದು ತುಂಬ ನಿಧಾನ; ಕೆಲಸವಿದ್ದಾಗ ಬೆಳಿಗ್ಗೆ ನಾಲ್ಕು ಗಂಟೆಗೇ ಎದ್ದುಬಿಡುತ್ತಿದ್ದರು. ಪತ್ರಿಕೆಗೆ ಲೇಖನ, ಭಾಷಣ, ಕರಪತ್ರ, ಠರಾವು — ಎಲ್ಲವನ್ನೂ ಅನಂತಕುಮಾರ್ ಅವರು ಲೀಲಾಜಾಲವಾಗಿ ನಿರ್ವಹಿಸುತ್ತಿದ್ದರು.

ಅವಕಾಶಗಳನ್ನು ತಾವೇ ಸೃಷ್ಟಿಸಿಕೊಳ್ಳುತ್ತಿದ್ದರು. ಉದಾಹರಣೆಗೆ, ಅರಸೀಕೆರೆಯಿಂದ ಬೆಂಗಳೂರಿಗೆ ಬರುತ್ತಿದ್ದರೆ ಅರ್ಧ ಗಂಟೆಯ ಸಮಯ ದೊರೆತರೂ ಮಧ್ಯದಲ್ಲಿ ತಿಪಟೂರು ಮತ್ತಿತರ ಪ್ರದೇಶಗಳಲ್ಲಿ ಇಳಿದು ಕಾರ್ಯಕರ್ತರನ್ನು ಭೇಟಿಯಾಗಿ ಮುಂದೆ ಸಾಗುತ್ತಿದ್ದರು. ಅವರು ರಾಜ್ಯ ಕಾರ್ಯದರ್ಶಿಯಾಗಿದ್ದಾಗ ಬಿರುಗಾಳಿಯಂತೆ ಪ್ರವಾಸ ಮಾಡುತ್ತಿದ್ದರು. ಪಾದಚಾರಿಯಾಗಿ ಸೈಕಲ್ಲು, ಸ್ಕೂಟರು, ಸರಕಾರಿ ಬಸ್ಸು ಮುಂತಾದ ಎಲ್ಲ ಸಂಚಾರವ್ಯವಸ್ಥೆಗಳನ್ನೂ ಬಳಸುತ್ತಿದ್ದರು. ರಾತ್ರಿಯಲ್ಲಿ ಕಾರ್ಯಕರ್ತರ ಮನೆಗಳಲ್ಲಿ ಉಳಿದುಕೊಳ್ಳುತ್ತಿದ್ದರು.

ವಿದ್ಯಾರ್ಥಿ ದೆಸೆಯಲ್ಲಿಯೂ ಅವರದು ಬಿಡುವಿಲ್ಲದ ಜೀವನ. ಪ್ರತಿ ವರ್ಷ ಪರಿಷತ್ತಿನ ಸಮ್ಮೇಳನಗಳನ್ನು ಸಂಘಟಿಸುತ್ತಿದ್ದರು. ಬೆಂಗಳೂರಿನ ಸಮಾವೇಶದ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಚೋ ರಾಮಸ್ವಾಮಿಯವರನ್ನು ಎದುರುಗೊಳ್ಳಲು ವಿಮಾನನಿಲ್ದಾಣಕ್ಕೆ ಹೋಗಿದ್ದವನು ನಾನೇ. ಆದರೆ, ನನಗೆ ಅವರನ್ನು ಗುರುತಿಸಲು ಸಾಧ್ಯವಾಗದೆ ಹಿಂತಿರುಗಿ ಪರಿಷತ್ತಿನ ಮುಖಂಡರಿಂದ ಬೈಸಿಕೊಂಡಿದ್ದೆ. ಒಮ್ಮೆ ರಾಜಸ್ಥಾನದಲ್ಲಿ ಸಮಾವೇಶವನ್ನು ಮುಗಿಸಿಕೊಂಡು ಡಾ. ಪಿ ವಿ ಕೃಷ್ಣ ಭಟ್ಟರ ನೇತೃತ್ವದಲ್ಲಿ ಮರಳಿ ಬರುವಾಗ ರೈಲಿನಲ್ಲಿ ಸತತವಾಗಿ 24 ಗಂಟೆಗಳ ಕಾಲ ಮೀಟಿಂಗ್ ನಡೆಸಿದ್ದರು. ನಮ್ಮ ಚಿಂತನೆಗಳಿಗೆ ಒಂದು ನಿರ್ದಿಷ್ಟ ಗತಿಯನ್ನು ನೀಡುವ ಕೆಲಸವನನ್ನು ಅವರು ಅಂದು ನಡೆಸಿದ್ದರು.

ಅನಂತಕುಮಾರರ ಅಂದಿನ ಎಲ್ಲ ಕೆಲಸಗಳೂ ಮುಂದೆ ಭಾರತೀಯ ಜನತಾ ಪಕ್ಷಕ್ಕೆ ಒಂದು ಸಂಘಟನಾತ್ಮಕ ರೂಪ ನೀಡಲು ಸಹಾಯ ಮಾಡಿದವು. ಮಾನ್ಯ ಯಡಿಯೂರಪ್ಪನವರು ಅರಸೀಕೆರೆಯಿಂದ ನೆಲಮಂಗಲದ ವರೆಗೆ ಪಾದಯಾತ್ರೆಯನ್ನು ಕೈಗೊಂಡಾಗ ಅದರ ಯಶಸ್ಸಿಗೆ ಎಲ್ಲ ವ್ಯವಸ್ಥೆಗಳನ್ನೂ ಮಾಡಿದವರು, ಅನಂತಕುಮಾರರು. ರಾಜಕೀಯದಲ್ಲಿ ನನಗೆ ಆಸಕ್ತಿಯಿರಲಿಲ್ಲವಾದರೂ 1991 ರಲ್ಲಿ ನನ್ನನ್ನು ಸಂಪರ್ಕಿಸಿ ಪಾದಯಾತ್ರೆಯ ಜವಾಬ್ದಾರಿಯನ್ನು ವಹಿಸಿದರು. ಮುಂದೆ 2004 ರಲ್ಲಿ ಶಾಸಕನಾಗಿ ಸ್ಪರ್ಧಿಸಲೂ ಅವರ ಒತ್ತಾಸೆ ಮತ್ತು ಪ್ರೋತ್ಸಾಹಗಳೇ ಕಾರಣ.

ಅನಂತಕುಮಾರರಿಗೆ ಅನೇಕ ಹಿರಿಯ ಸಾಧಕರ, ಕಿರಿಯ ಸ್ನೇಹಿತರ ಒಡನಾಟ ದೊರೆತಿತ್ತು. ಪರಿಷತ್ತಿನಲ್ಲಿ ಪಿ ವಿ ಕೃಷ್ಣ ಭಟ್, ಯಶವಂತರಾವ್ ಕೇಲ್ಕರ್ ಮತ್ತು ಬಾಳ ಆಪ್ಟೆಯಂತಹ ಹಿರಿಯರಿಗೆ ಅವರು ಆತ್ಮೀಯರಾಗಿದ್ದರು. ಭಾರತೀಯ ಜನತಾ ಪಕ್ಷವನ್ನು ಸೇರಿದ ನಂತರ ಅದ್ವಾನಿಯವರ ಮಾರ್ಗದರ್ಶನದಲ್ಲಿ ಬೆಳೆದರು. ದತ್ತಾತ್ರೇಯ ಹೊಸಬಾಳೆ, ಸಿ ಟಿ ರವಿ, ಅರವಿಂದ ಲಿಂಬಾವಳಿ, ಎಂ ಪಿ ಕುಮಾರ್ ಮುಂತಾದ ಅನೇಕ ಹಿರಿಕಿರಿಯ ಕಾರ್ಯಕರ್ತರ ಪಡೆ ಅನಂತಕುಮಾರರ ಹತ್ತಿರವಿತ್ತು. ಆ ಸಮಯದಲ್ಲಿ ಗೋವಿಂದಾಚಾರ್ಯರು ವಿದ್ಯಾರ್ಥಿ ಪರಿಷತ್ತಿನ ದಕ್ಷಿಣ ಭಾರತದ ಜವಾಬ್ದಾರಿಯನ್ನು ವಹಿಸಿಕೊಂಡಿದ್ದರು.

ಮುಂದೆ ಸಂಘದ ಆದೇಶದಂತೆ ರಾಜಕೀಯ ಪ್ರವೇಶ ಮಾಡಿದ ಅವರು ಸೈಕಲ್, ಬಸ್ಸು, ರೈಲುಗಳ ಮೂಲಕ ಎಲ್ಲ 224 ಕ್ಷೇತ್ರಗಳನ್ನೂ ಪ್ರವಾಸ ಮಾಡಿ ಪಕ್ಷವನ್ನು ಅಧಿಕಾರಕ್ಕೆ ತರಲು ಶ್ರಮಿಸಿದರು. ಅನಂತಕುಮಾರರು ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿಯಾದ ನಂತರ ಪ್ರಮುಖ ರಾಜ್ಯಗಳ ಚುನಾವಣಾ ಪ್ರಭಾರಿಯಾಗಿ ಕಾರ್ಯ ನಿರ್ವಹಿಸಿದರು. ಕೇಂದ್ರದಲ್ಲಿ ಸಚಿವರಾಗಿದ್ದ ಅವಧಿಯಲ್ಲಿ ಅವರು ಕರ್ನಾಟಕದ ಸಮರ್ಥ ಪ್ರತಿನಿಧಿಯಾಗಿದ್ದರು. ಕಾವೇರಿ ಜಲಮಂಡಳಿ, ಬೆಂಗಳೂರು ಮೆಟ್ರೋ, ನದಿ ನೀರಿನ ಹಂಚಿಕೆ ಮುಂತಾದ ಎಲ್ಲ ವಿಷಯಗಳಲ್ಲಿ ರಾಜ್ಯದ ಹಿತವನ್ನು ಕಾಪಾಡಲು ರಾಜ್ಯ ಸರಕಾರಗಳು ಅನಂತಕುಮಾರರ ನೆರವನ್ನು ಪಡೆದುಕೊಂಡಿದ್ದವು. ಮಂತ್ರಿಯಾಗಿ ನಾವು ಅವರನ್ನು ಬೇವು ಲೇಪಿತ ಯೂರಿಯಾ ಮತ್ತು ಜನೌಷಧಿ ಯೋಜನೆಗಳಿಗಾಗಿ ಸದಾ ಸ್ಮರಿಸಿಕೊಳ್ಳಬೇಕು.

ವೈಯಕ್ತಿಕವಾಗಿ ನನಗೆ ಅನಂತಕುಮಾರರ ಜೊತೆ ಸುಮಾರು ನಲವತ್ತು ವರ್ಷಗಳ ಆತ್ಮೀಯ ಸಂಬಂಧವಿತ್ತು. ನನ್ನ ಕ್ಷೇತ್ರದಲ್ಲಿ ಕೊಬ್ಬರಿಯ ಬೆಲೆ ಕುಸಿತವಾಗಿ ಬೆಳೆಗಾರರು ದುಃಸ್ಥಿತಿಯಲ್ಲಿದ್ದಾಗ ನಾನು ಬೆಂಬಲ ಬೆಲೆಯನ್ನು ಹೆಚ್ಚಿಸುವಂತೆ ದೆಹಲಿಗೆ ನಿಯೋಗವನ್ನು ಕೊಂಡೊಯ್ದಿದ್ದೆ. ಆಗ ಅವರು ನಮ್ಮನ್ನು ಅಮಿತ್ ಶಾರೊಂದಿಗೆ ಭೇಟಿ ಮಾಡಿಸಿ, ಬೆಂಬಲ ಬೆಲೆಯನ್ನು 6000 ರೂಪಾಯಿಗಳಿಂದ 10000 ರೂಪಾಯಿಗಳಿಗೆ ತತ್ ಕ್ಷಣದಿಂದ ಹೆಚ್ಚಿಸುವ ನಿರ್ಧಾರಕ್ಕೆ ಕಾರಣರಾದರು. ಅದೇ ರೀತಿ ಜಿಎಸ್‌ಟಿ ಕಡಿಮೆ ಮಾಡಲೂ ಕೂಡ ನಾವು ಮಾಡಿಕೊಂಡ ಮನವಿಗಳಿಗೆ ಅವರು ಆ ಕೂಡಲೇ ಸ್ಪಂದಿಸಿದ್ದರು.

ಸ್ವಂತ ಸಾಮರ್ಥ್ಯ, ಅಪಾರ ಪರಿಶ್ರಮ ಮತ್ತು ಸಂಘಟನೆಯ ಜೊತೆಗೆ ದೀರ್ಘಕಾಲದ ನಿರಂತರ ಸಂಪರ್ಕಗಳ ಮೂಲಕ ಅವರು ದೇಶದ ಮುಂಚೂಣಿಯ ನಾಯಕರಾಗಿ ಬೆಳೆದರು. ಸಾಮಾನ್ಯ ಹಿನ್ನೆಲೆಯಿಂದ ದೇಶದ ಉನ್ನತ ನಾಯಕರಲ್ಲೊಬ್ಬರಾಗಿ ಬೆಳೆದ ಅನಂತಕುಮಾರರು ನಮ್ಮ ನಡುವೆ ಇನ್ನಷ್ಟು ದಿನ ಇರಬೇಕಾಗಿತ್ತು. ಆದರೆ ತಾವು ಕೈಗೊಂಡ ಕಾರ್ಯಗಳನ್ನು ಮುಂದುವರೆಸಿಕೊಂಡು ಹೋಗಲು ಸಾವಿರಾರು ಕಾರ್ಯಕರ್ತರ ಪಡೆಯನ್ನು ಹಿಂದೆ ಬಿಟ್ಟು ಹೋಗಿದ್ದಾರೆ. ಅನಂತಕುಮಾರರ ಪತ್ನಿ ತೇಜಸ್ವಿನಿಯವರೂ ಅನಂತಕುಮಾರರ ಸಾಮಾಜಿಕ ಸೇವೆಗಳನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ.

# ಆತ್ಮಗೌರವ, ಆತ್ಮನಿರ್ಭರತೆ ಮತ್ತು ಹೊಣೆಗಾರಿಕೆ




**ಭಾ**ರತದ ಸಂಸತ್ತು, 80ನೇ ಸ್ವಾತಂತ್ರ್ಯ ದಿನಾಚರಣೆಯ ಈ ಸಂದರ್ಭದಲ್ಲಿ ಒಂದು ಐತಿಹಾಸಿಕ ಹೆಜ್ಜೆ ಇಟ್ಟಿತು. ಜುಲೈ 30ರಂದು ಲೋಕಸಭೆ, ನಂತರ ರಾಜ್ಯಸಭೆ ಅಂಗೀಕರಿಸಿದ 'ರಾಷ್ಟ್ರೀಯ ಗೌರವ ಅವಮಾನ ತಡೆ (ತಿದ್ದುಪಡಿ) ಮಸೂದೆ 2026'ಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಆಗಸ್ಟ್ 12ರಂದು ಒಪ್ಪಿಗೆ ನೀಡಿದರು. ಇದರೊಂದಿಗೆ 'ವಂದೇ ಮಾತರಂ' ರಾಷ್ಟ್ರೀಯ ಗೀತಕ್ಕೆ 'ಜನ ಗಣ ಮನ'ಕ್ಕೆ ಸಮಾನವಾದ ಶಾಸನಬದ್ಧ ರಕ್ಷಣೆ ದೊರೆತಿದೆ. ಬಂಕಿಮಚಂದ್ರ ಚಟ್ಟೋಪಾಧ್ಯಾಯ ರಚಿಸಿದ, ಸ್ವಾತಂತ್ರ್ಯ ಹೋರಾಟಗಾರರಿಗೆ ಸ್ಫೂರ್ತಿಯ ಸೆಲೆಯಾಗಿದ್ದ ಈ ಗೀತೆಯ 150ನೇ ವರ್ಷಾಚರಣೆಯ ಸಂದರ್ಭದಲ್ಲೇ ಈ ಕಾನೂನು ಜಾರಿಗೆ ಬಂದಿರುವುದು ವಿಶೇಷ ಅರ್ಥ ಪಡೆದಿದೆ. ರಾಷ್ಟ್ರದ ಸ್ವಾತಂತ್ರ್ಯ ಹೋರಾಟದ ಆತ್ಮಸ್ವರೂಪವಾದ ಈ ಗೀತೆಗೆ ಕಾನೂನಿನ ಗೌರವ ದೊರೆತಿರುವುದು ಪ್ರತಿಯೊಬ್ಬ ಅಪ್ಪಟ ದೇಶಭಕ್ತನ ಇಚ್ಛೆ ಪೂರೈಸಿದಂತಾಗಿದೆ.

ಅಟಲ್ ಬಿಹಾರಿ ವಾಜಪೇಯಿ ಅವರ ನೇತೃತ್ವದ ಸರ್ಕಾರದಲ್ಲಿ ಯುವಜನ, ಕ್ರೀಡೆ ಮತ್ತು ಸಂಸ್ಕೃತಿ ಸಚಿವರಾಗಿದ್ದ ಶ್ರೀ ಅನಂತಕುಮಾರ್ ಅವರು, ಹೊಸ ಸಹಸ್ರಮಾನವನ್ನು 'ಅಖಂಡ ವಂದೇ ಮಾತರಂ' ಗಾಯನದೊಂದಿಗೆ ಪ್ರಾರಂಭಿಸಬೇಕೆಂಬ ಕಲ್ಪನೆಯನ್ನು ಜಾರಿಗೆ ತಂದಿದ್ದರು. ಸಂವಿಧಾನ ಜಾರಿಗೆ ಬಂದು 50 ವರ್ಷ ತುಂಬಿದ ಸಂದರ್ಭವೂ ಅದೇ ಆಗಿತ್ತು. ಇದಕ್ಕಾಗಿ ಅವರು ರಾಷ್ಟ್ರಮಟ್ಟದ ಕಾರ್ಯಕ್ರಮವನ್ನು ದೊಡ್ಡ ಮಟ್ಟದಲ್ಲಿ ಆಯೋಜಿಸಿದ್ದರು. ಇದು ಕೇವಲ ಸಾಂಸ್ಕೃತಿಕ ಕಾರ್ಯಕ್ರಮ ಮಾತ್ರವಾಗಿರಲಿಲ್ಲ; ಅದು ರಾಷ್ಟ್ರದ ಆತ್ಮಗೌರವದ ಪುನರ್‌ಘೋಷಣೆಯಾಗಿತ್ತು.

ಹೊಸ ವರ್ಷದ ಸ್ವಾಗತವನ್ನು ಅಖಂಡ ವಂದೇ ಮಾತರಂ ಗೀತಗಾಯನದೊಂದಿಗೆ ಬರಮಾಡಿಕೊಳ್ಳುವ ಈ ಪರಂಪರೆಯನ್ನು 'ಅದಮ್ಯ ಚೇತನ' ಇಂದಿಗೂ ಮುಂದುವರಿಸಿಕೊಂಡು ಬಂದಿದೆ. ಇದಕ್ಕೆ ಮುಖ್ಯ ಪ್ರೇರಣೆ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘದ ಪರಂಪರೆ; ಅಲ್ಲಿ ಪ್ರತಿಯೊಂದು ಕಾರ್ಯಕ್ರಮದಲ್ಲೂ ಅಖಂಡ ವಂದೇ ಮಾತರಂ ಇರಲೇಬೇಕು.

ಆಡಳಿತ ಮಂಡಳಿಯ ಅಧ್ಯಕ್ಷೆಯಾಗಿ IIEST ಶಿಬ್‌ಪುರದ ಘಟಿಕೋತ್ಸವದಲ್ಲಿ, ಬಂಕಿಮಚಂದ್ರರ ನಾಡಿನಲ್ಲೇ, ವಂದೇ ಮಾತರಂ ಹೇಳಿಸಲು ಹೆಣಗಾಡಬೇಕಾಯಿತು. 2024ರಲ್ಲಿ ರಾಷ್ಟ್ರೀಯ ಗೀತ ಗಾಯನ ಎಂದು ಆಮಂತ್ರಣ ಪತ್ರಿಕೆಯಲ್ಲಿ ಬರೆದು ಒಂದೇ ನುಡಿಯ ಗೀತೆ ಹೇಳಿ, ಅದರಿಂದ ಧೈರ್ಯ ಪಡೆದು 2025ರ ಘಟಿಕೋತ್ಸವದಲ್ಲಿ ಪೂರ್ತಿ ಗೀತೆ ಹೇಳಿದೆವು. ಶ್ರೀ ನರೇಂದ್ರ ಮೋದಿಯವರ ದೃಢ ನಿಲುವಿನಿಂದಾಗಿ, ಈ ವರ್ಷ ಅಳುಕಿಲ್ಲದೆ ಸಂಪೂರ್ಣ ಅಭಿಮಾನದಿಂದ ನಾವು ಈ ಗೀತೆಯನ್ನು ಎಲ್ಲ ಕಾರ್ಯಕ್ರಮಗಳಲ್ಲಿ ಹಾಡಲಿದ್ದೇವೆ; ನಮ್ಮಲ್ಲಷ್ಟೇ ಅಲ್ಲ, ದೇಶದ ಪ್ರತಿ ಶಿಕ್ಷಣ ಸಂಸ್ಥೆಯಲ್ಲೂ, ಪ್ರತಿ ಸರಕಾರಿ ಕಾರ್ಯಕ್ರಮದಲ್ಲೂ ಇದು ಮೊಳಗಲಿದೆ.

ಮಳೆಗಾಲದ ಈ ಆಗಸ್ಟ್ ತಿಂಗಳು 'ಅದಮ್ಯ ಚೇತನ'ಕ್ಕೂ ಕ್ರಿಯಾಶೀಲತೆಯ ತಿಂಗಳಾಗಿತ್ತು. ಆಗಸ್ಟ್ ೮ರಂದು ಬೆಂಗಳೂರಿನ ಬನಶಂಕರಿಯಲ್ಲಿ ನಾವು ೫೦೦ ಎತ್ತರದ, ಸ್ಥಳೀಯ ಜಾತಿಯ ಸಸಿಗಳನ್ನು ನೆಟ್ಟೆವು. ಮುಂದಿನ ವಾರವೇ, ಟೈಮ್ಸ್ ಆಫ್ ಇಂಡಿಯಾದ #Iam-Bengaluru – Volunteer for Parks ಉಪಕ್ರಮದ ಮೊದಲ ಚಟುವಟಿಕೆಯನ್ನು ಅದಮ್ಯ ಚೇತನ ತನ್ನ ಪಾಲುದಾರರ ಸಹಯೋಗದೊಂದಿಗೆ ಬನಶಂಕರಿ ೬ನೇ ಹಂತದ BDA ಪಾರ್ಕ್‌ನಲ್ಲಿ ನಡೆಸಿಕೊಟ್ಟಿತು; ಸ್ವಯಂಸೇವಕರು ಇಲ್ಲಿಯೂ ಸಸಿಗಳನ್ನು ನೆಟ್ಟರು.




ತೇಜಸ್ವಿನಿ ಅನಂತಕುಮಾರ್

IIEST ಶಿಬ್‌ಪುರದಲ್ಲಿಯೂ ಸಂತಸಪಡುವ ಮತ್ತೊಂದು ಸಂದರ್ಭ ಸೇರ್ಪಡೆಯಾಗಿದೆ. ಆಡಳಿತ ಮಂಡಳಿಯ ಅಧ್ಯಕ್ಷೆಯಾಗಿ ನನ್ನ ಮೂರು ವರ್ಷಗಳ ಅವಧಿ ಮುಕ್ತಾಯದ ಹಂತಕ್ಕೆ ಬರುತ್ತಿರುವ ಈ ಸಂದರ್ಭದಲ್ಲಿ, 1,160 ಹಾಸಿಗೆಗಳ ಸಾಮರ್ಥ್ಯದ, ಭೋಜನಾಲಯ ಮತ್ತು ಅಡುಗೆಮನೆ ಸೌಲಭ್ಯಗಳಿರುವ ಬೃಹತ್ ವಿದ್ಯಾರ್ಥಿನಿಲಯ 'ಡಾ. ಶ್ಯಾಮ ಪ್ರಸಾದ್ ಮುಖರ್ಜಿ ಹಾಲ್' ಉದ್ಘಾಟನೆಗೊಂಡಿತು. ಐದು ವರ್ಷಗಳ ಹಿಂದೆ ಹತ್ತು ಮಹಡಿಯ 1000 ಹಾಸಿಗೆಯ ಹಾಸ್ಟೆಲ್ ಸುಮಾರು ₹130 ಕೋಟಿ ವೆಚ್ಚ ಅಂದಾಜಿಸಲಾಗಿದ್ದ ಈ ಯೋಜನೆಯು ಶಂಕುಸ್ಥಾಪನೆಯಾದ ನಾಲ್ಕು ವರ್ಷಗಳೊಳಗೆ ಪೂರ್ಣಗೊಂಡಿದೆ. ಇನ್ನೂ ವಿಶೇಷವೆಂದರೆ, ಕೇವಲ 115 ಕೋಟಿಯಲ್ಲಿ 1160 ಹಾಸಿಗೆಯ ಹಾಸ್ಟೆಲ್ ಕಟ್ಟಲಾಗಿದೆ. ಇಂತಹ ಬೃಹತ್ ಸಾರ್ವಜನಿಕ ಯೋಜನೆಯನ್ನು ಸಮಯಕ್ಕೆ ಸರಿಯಾಗಿ ಪೂರ್ಣಗೊಳಿಸುವುದರ ಜೊತೆಗೆ, ಸಾರ್ವಜನಿಕ ಹಣವನ್ನು ಗಣನೀಯವಾಗಿ ಉಳಿಸಿರುವುದು ಅಸಾಧಾರಣ ಸಾಧನೆ ಮತ್ತು ಮೆಚ್ಚುಗೆಗೆ ಅರ್ಹವಾದುದು. ಬದ್ಧತೆ, ಉತ್ತರದಾಯಿತ್ವ ಸರ್ಕಾರದ ಅನುದಾನಿತ ಸಂಸ್ಥೆಯಲ್ಲಿಯೂ ಏನನ್ನು ಸಾಧಿಸಬಹುದು ಎಂಬುದಕ್ಕೆ ಇದು ಉತ್ತಮ ಉದಾಹರಣೆ.

ನಾವು ಪ್ರಗತಿಯನ್ನು ಸಂಭ್ರಮಿಸುವಾಗಲೇ, ನಮ್ಮ ಯುವಜನರ ಧ್ವನಿ ಮತ್ತು ಕಳವಳಗಳತ್ತಲೂ ಗಮನ ಹರಿಸಬೇಕಾಗಿದೆ. ವಿಶೇಷವಾಗಿ ಜಂತರ್ ಮಂತರ್ ಪ್ರತಿಭಟನೆಯ ನಂತರ, ತಮ್ಮನ್ನು ಕಾಡುವ ವಿಷಯಗಳ ಕುರಿತು ಧ್ವನಿ ಎತ್ತಲು ಮತ್ತು ನ್ಯಾಯಕ್ಕಾಗಿ ಆಗ್ರಹಿಸಲು ಯುವಜನರು ಬಹಳ ಬೇಗ ಮುಂದಾಗುತ್ತಿದ್ದಾರೆ. ಇದು ಸ್ವಸ್ಥ ಪ್ರಜಾಪ್ರಭುತ್ವದ ಲಕ್ಷಣ. ಆದರೆ ಇಂತಹ ಚಳವಳಿಗಳೊಳಗೆ ಸಮಾಜವಿರೋಧಿ ಮತ್ತು ರಾಷ್ಟ್ರವಿರೋಧಿ ಶಕ್ತಿಗಳು ಪ್ರವೇಶಿಸಿ, ಯುವಜನರ ನೈಜ ಕಳವಳಗಳನ್ನು ತಮ್ಮದೇ ಕಾರ್ಯಸೂಚಿಗೆ ಬಳಸಿಕೊಳ್ಳುವ ಅಪಾಯವೂ ಇದೆ. ಪ್ರತಿಭಟನೆಗಳು ಕಾನೂನು ಮತ್ತು ಪ್ರಜಾಪ್ರಭುತ್ವದ ಚೌಕಟ್ಟಿನೊಳಗೆ ಇದ್ದಾಗ ಸದಾ ಆರೋಗ್ಯಕರ; ಆ ಮಿತಿ ಮೀರಿದಾಗ ಅದೇ ಶಕ್ತಿ ವಿನಾಶಕಾರಿಯಾಗಬಲ್ಲದು. ಹಾಗಾಗಿ ಈ ಪರಿಸ್ಥಿತಿಯನ್ನು ಎಚ್ಚರಿಕೆಯಿಂದ ಗಮನಿಸುತ್ತಾ, ನಮ್ಮ ಯುವಜನರನ್ನು ತಿಳಿವಳಿಕೆಯುಳ್ಳ, ಜವಾಬ್ದಾರಿಯುತ ಮತ್ತು ರಚನಾತ್ಮಕ ಕ್ರಿಯಾಶೀಲತೆಯತ್ತ ಮುನ್ನಡೆಸಬೇಕಾಗಿದೆ.

ಪ್ರಗತಿ, ಜವಾಬ್ದಾರಿ ಮತ್ತು ಸಾಮಾಜಿಕ ಚಿಂತನೆಗಳ ನಡುವೆಯೇ, ಈ ತಿಂಗಳು ನಮಗೆ ಆಳವಾದ ವೈಯಕ್ತಿಕ ದುಃಖವನ್ನೂ ತಂದಿತು. ನಮಗೆ ಅತ್ಯಂತ ಆತ್ಮೀಯರಾಗಿದ್ದ ಇಬ್ಬರು ನಾಗೇಶ್‌ರನ್ನು ನಾವು ಕಳೆದುಕೊಂಡೆವು. ಶ್ರೀ ಬಿ. ಸಿ. ನಾಗೇಶ್ ಅವರು ಅನಂತಕುಮಾರ್ ಜೀ ಅವರ ದೀರ್ಘಕಾಲದ ಒಡನಾಡಿಯಾಗಿದ್ದರು. ವಿದ್ಯಾರ್ಥಿ ಕಾರ್ಯಕರ್ತರಾಗಿದ್ದ ದಿನಗಳಿಂದಲೇ ಸಾರ್ವಜನಿಕ ಜೀವನಕ್ಕೆ ಬದ್ಧರಾಗಿದ್ದ ಅವರು ಮುಂದೆ ಕರ್ನಾಟಕದ ಶಿಕ್ಷಣ ಸಚಿವರಾಗಿ ಸೇವೆ ಸಲ್ಲಿಸಿದರು. ಶ್ರೀ ನಾಗೇಶ್ ಮೋಕಾಶಿ ಅವರು ಅದಮ್ಯ ಚೇತನದೊಂದಿಗೆ ನಿಕಟವಾಗಿ ಬೆಸೆದುಕೊಂಡು, ವರ್ಷಗಳ ಕಾಲ ನಮ್ಮ ವಿವಿಧ ಚಟುವಟಿಕೆಗಳಿಗೆ ಅಪಾರ ಕೊಡುಗೆ ನೀಡಿದ್ದರು. ಯಾವುದೇ ಕೆಲಸವಿದ್ದರೂ ಅವರು ಸದಾ ನಮ್ಮೊಂದಿಗಿದ್ದರು. ಅವರಿಬ್ಬರ ಪಯಣಗಳು ವಿಭಿನ್ನವಾಗಿದ್ದರೂ, ಅವರಿಬ್ಬರಲ್ಲೂ ಒಂದು ಮಹತ್ವದ ಸಾಮ್ಯವಿತ್ತು. ಇಬ್ಬರೂ "ಸರಳ ಜೀವನ, ಉನ್ನತ ಚಿಂತನೆ" ಎಂಬ ಆದರ್ಶದ ಸಾಕಾರ ರೂಪವಾಗಿದ್ದರು. ಅವರ ಬದ್ಧತೆ, ಸರಳತೆ ಮತ್ತು ಸೇವೆಗೆ ಸದಾ ಸಿದ್ಧರಾಗಿರುವ ಗುಣ ನಮ್ಮೊಂದಿಗೆ ಉಳಿಯುತ್ತದೆ. ಇಬ್ಬರಿಗೂ ನಮ್ಮ ಹೃದಯಪೂರ್ವಕ ಶ್ರದ್ಧಾಂಜಲಿ.

ನಾವು ಹಬ್ಬಗಳ ಋತುವಿನತ್ತ ಸಾಗುತ್ತಿರುವಾಗ, ಗಣೇಶ ಚತುರ್ಥಿಯು ಸಂಭ್ರಮದೊಂದಿಗೆ ಜವಾಬ್ದಾರಿಯೂ ಇರಬೇಕು ಎಂಬುದನ್ನು ನೆನಪಿಸುತ್ತದೆ. ಪರಿಸರಸ್ನೇಹಿ ಆಚರಣೆಗಳು, ಪ್ರಕೃತಿಯ ಬಗೆಗಿನ ಗೌರವ ಮತ್ತು ಸಂಪನ್ಮೂಲಗಳ ಮಿತ ಬಳಕೆ ನಮ್ಮ ಎಲ್ಲ ಹಬ್ಬಗಳ ಅವಿಭಾಜ್ಯ ಅಂಗವಾಗಬೇಕು. ಯುರೋಪಿನ ಕೆಲವು ಭಾಗಗಳಲ್ಲಿ ಅತಿಯಾದ ತಾಪಮಾನ ಮತ್ತು ವಿನಾಶಕಾರಿ ಕಾಡ್ಗಿಚ್ಚುಗಳು ಸಂಭವಿಸುತ್ತಿರುವ ಈ ಸಂದರ್ಭದಲ್ಲಿ, ನಿಸರ್ಗದ ಸಂದೇಶ ಮತ್ತಷ್ಟು ಗಟ್ಟಿಯಾಗಿ ಕೇಳಿಸುತ್ತಿದೆ. ಅಭಿವೃದ್ಧಿಯನ್ನು ಸುಸ್ಥಿರತೆಯಿಂದ ಬೇರ್ಪಡಿಸಲು ಸಾಧ್ಯವಿಲ್ಲ

ಅದು ಆತ್ಮನಿರ್ಭರತೆಯಾಗಿರಲಿ, ಜವಾಬ್ದಾರಿಯುತ ಯುವ ಕ್ರಿಯಾಶೀಲತೆಯಾಗಿರಲಿ, ಸಾರ್ವಜನಿಕ ಹಣದ ಸಮರ್ಥ ಬಳಕೆಯಾಗಿರಲಿ, ತಾಂತ್ರಿಕ ಪ್ರಗತಿಯಾಗಿರಲಿ ಅಥವಾ ನಮ್ಮ ಗಿಡಮರಗಳು ಮತ್ತು ಪರಿಸರದ ಕಾಳಜಿಯಾಗಿರಲಿ, ಅಂತಿಮವಾಗಿ ಮೂಲತತ್ತ್ವ ಒಂದೇ — ಹಕ್ಕುಗಳೊಂದಿಗೆ ಜವಾಬ್ದಾರಿಯೂ ಇರಬೇಕು, ಮಹತ್ವಾಕಾಂಕ್ಷೆಯೊಂದಿಗೆ ಶಿಸ್ತೂ ಇರಬೇಕು ಮತ್ತು ಅಭಿವೃದ್ಧಿಯೊಂದಿಗೆ ಮುಂದಿನ ಪೀಳಿಗೆಯ ಬಗೆಗಿನ ಕಾಳಜಿಯೂ ಇರಬೇಕು. ಇದೇ ಬಲಿಷ್ಠ ಮತ್ತು ಹೆಚ್ಚು ಆತ್ಮವಿಶ್ವಾಸದ ಭಾರತದತ್ತ ಸಾಗುವ ಹಾದಿ.




ಅದಮ್ಯ ಚೇತನ ಮತ್ತು ಆಸ್ಟೆಲ್ಲಾಸ್ ಫಾರ್ಮಾ (Astellas Pharma) ಸಂಸ್ಥೆಗಳ ಜಂಟಿ ಆಶ್ರಯದಲ್ಲಿ ಆಗಸ್ಟ್ 8, 2026 ರಂದು ಬನಶಂಕರಿ 6ನೇ ಹಂತದ 10ನೇ ಬ್ಲಾಕ್‌ನಲ್ಲಿ ಬೃಹತ್ ಸಸಿ ನೆಡುವ ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಯಾಗಿ ಆಯೋಜಿಸಲಾಯಿತು. ಪರಿಸರ ಸಂರಕ್ಷಣೆ ಮತ್ತು ಹಸಿರು ಬೆಂಗಳೂರು ನಿರ್ಮಾಣದ ಸಂಕಲ್ಪದೊಂದಿಗೆ ಹಮ್ಮಿಕೊಳ್ಳಲಾಗಿದ್ದ ಈ ಅರ್ಥಪೂರ್ಣ ಕಾರ್ಯಕ್ರಮದಲ್ಲಿ ಒಟ್ಟಾರೆ ಐನೂರಕ್ಕೂ ಹೆಚ್ಚು 10 ಅಡಿ ಎತ್ತರದ ಸಸಿಗಳನ್ನು ನೆಡಲಾಯಿತು. ವಿಶೇಷವಾಗಿ 50 ಪನ್ನೇರಳೆ,, 40 ಬೇವು, 55 ಕಾಡು ಬಾದಾಮಿ, 50 ಸಂಪಿಗೆ, 40 ನಾಗಲಿಂಗ ಪುಷ್ಪ, 45 ನೇರಳೆ, 20 ಅತ್ತಿ, 30 ಹಲಸು ಹಾಗೂ 20 ಅರಳಿ ಸೇರಿದಂತೆ ವಿವಿಧ ಬಗೆಯ ಉಪಯುಕ್ತ ಸ್ಥಳೀಯ ತಳಿಯ ಗಿಡಗಳಿಗೆ ಈ ಕಾರ್ಯಕ್ರಮದಲ್ಲಿ ನೆಡಲಾಯಿತು

ಈ ಕಾರ್ಯಕ್ರಮದಲ್ಲಿ ಆಸ್ಟೆಲ್ಲಾಸ್ ಫಾರ್ಮಾ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀಮತಿ ಮುಕ್ತಾ ಹಾಗೂ ಸಿಎಸ್‌ಆರ್ (CSR) ವಿಭಾಗದ ಮುಖ್ಯಸ್ಥರಾದ ಶ್ರೀ ಶಿವಶೆಟ್ಟಿ ಅವರು ವಿಶೇಷವಾಗಿ ಉಪಸ್ಥಿತರಿದ್ದರು. ಇವರೊಂದಿಗೆ ಕಂಪನಿಯ ಸುಮಾರು 60ಕ್ಕೂ ಹೆಚ್ಚು ಉದ್ಯೋಗಿಗಳು ಅತ್ಯಂತ ಉತ್ಸಾಹದಿಂದ ಪಾಲ್ಗೊಂಡು ಸಸಿಗಳನ್ನು ನೆಡುವ ಮೂಲಕ ಪರಿಸರ ಕಾಳಜಿಯನ್ನು ಮೆರೆದರು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ವ್ಯವಸ್ಥಾಪಕ ನಿರ್ದೇಶಕರಾದ ಮುಕ್ತಾ ಅವರು, ಅದಮ್ಯ ಚೇತನ ಸಂಸ್ಥೆಯೊಂದಿಗೆ ಕೈಜೋಡಿಸಿ ಈ ಪರಿಸರ ಕಾರ್ಯದಲ್ಲಿ ತೊಡಗಿಸಿಕೊಂಡಿರುವುದು ತಮಗೆ ಅತೀವ ಸಂತಸ ತಂದಿದೆ ಎಂದು ಹರ್ಷ ವ್ಯಕ್ತಪಡಿಸಿದರು. "ಒಂದು ಗಿಡ ನೆಡಲು ಅತ್ಯುತ್ತಮ ಸಮಯ ಇಪ್ಪತ್ತು ವರ್ಷಗಳ ಹಿಂದೆಯೇ ಇತ್ತು. ಆದ್ರೆ ಎರಡನೇ ಅತ್ಯುತ್ತಮ ಸಮಯ ಯಾವುದು ಗೊತ್ತಾ? ಅದು ಇವತ್ತು!" ಎಂಬ ಪ್ರಸಿದ್ಧ ಮಾತನ್ನು ಉಲ್ಲೇಖಿಸಿದ ಇಂದು ಮತ್ತೆ ಈ ಅಭಿಯಾನದ ಮೂಲಕ ಸಸಿ ನೆಡುವ ಅವಕಾಶ ಸಿಕ್ಕಿರುವುದು ವಿಶೇಷ ಅನುಭವ ನೀಡಿದೆ ಎಂದು ಹೇಳುತ್ತಾ ನೆರೆದಿದ್ದ ಎಲ್ಲರನ್ನೂ ಪರಿಸರ ಸಂರಕ್ಷಣೆಯತ್ತ ಹುರಿದುಂಬಿಸಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಅದಮ್ಯ ಚೇತನ ಸಂಸ್ಥೆಯ ಶ್ರೀಮತಿ ತೇಜಸ್ವಿನಿ ಅನಂತ್ ಕುಮಾರ್ ಅವರು ಮಾತನಾಡಿ, ಇಂದಿನ ದಿನಗಳಲ್ಲಿ ಮರಗಳನ್ನು ಬೆಳೆಸುವ ತುರ್ತು ಅಗತ್ಯವನ್ನು ಬಹಳ ಮಾರ್ಮಿಕವಾಗಿ ಎತ್ತಿ ತೋರಿಸಿದರು. ಒಬ್ಬ ಮನುಷ್ಯನಿಗೆ ಉಸಿರಾಡಲು 700 ಕೆ.ಜಿ. ಆಮ್ಲಜನಕದ ಅವಶ್ಯಕತೆಯಿದ್ದು, ಈ ಪ್ರಮಾಣವನ್ನು ಪೂರೈಸಲು ಪ್ರತಿಯೊಬ್ಬರಿಗೂ ಕನಿಷ್ಠ ಏಳು ಮರಗಳ ಅಗತ್ಯವಿದೆ ಎಂದು ಅವರು ವಿವರಿಸಿದರು. ದಿನೇ ದಿನೇ ಹೆಚ್ಚುತ್ತಿರುವ ಬೆಂಗಳೂರಿನ ವಾಯುಮಾಲಿನ್ಯವನ್ನು ತಡೆಗಟ್ಟಲು ಇಂತಹ ಸಸಿ ನೆಡುವ ಕಾರ್ಯಕ್ರಮಗಳು ಅತ್ಯಂತ ಅವಶ್ಯಕ ಎಂದರು

ಈ ಪರಿಸರಸ್ನೇಹಿ ಅಭಿಯಾನದಲ್ಲಿ ಜಯನಗರದ ವಿಜಯ ಕಾಲೇಜು ಹಾಗೂ ಆದರ್ಶ ಕಾಲೇಜಿನ ವಿದ್ಯಾರ್ಥಿಗಳು, ಮತ್ತು ಅದಮ್ಯ ಚೇತನದ ಸ್ವಯಂಸೇವಕರು ಅತ್ಯಂತ ಸಕ್ರಿಯವಾಗಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## ಅದಮ್ಯ ಚೇತನ ತಿಂಗಳ ವರದಿ
## ಜುಲೈ -ಆಗಸ್ಟ್ 2026

**ಹಸಿರು ಭಾನುವಾರ :** ಅದಮ್ಯ ಚೇತನ ಸಂಸ್ಥೆಯ 'ಹಸಿರು ಭಾನುವಾರ' ಯೋಜನೆಯಡಿ 552ರಿಂದ 555ನೇ ಭಾನುವಾರದವರೆಗೆ ನಗರದ ವಿವಿಧ ಸ್ಥಳಗಳಲ್ಲಿ ಹಮ್ಮಿಕೊಳ್ಳಲಾಗಿದ್ದ ಗಿಡ ನೆಡುವ ಕಾರ್ಯಕ್ರಮಗಳು ಯಶಸ್ವಿಯಾಗಿ ಜರುಗಿದವು.552, 553, 554 ಮತ್ತು 555ನೇ ಹಸಿರು ಭಾನುವಾರಗಳು ಕ್ರಮವಾಗಿ ಬನಶಂಕರಿ 6ನೇ ಹಂತದ ಜಟ್ಟಿಗನಹಳ್ಳಿ, ಆರ್.ಆರ್. ನಗರದ ಚಿನ್ನಸಂದ್ರದ ಕೃಷ್ಣ ರೆಸಿಡೆನ್ಸಿ ಆವರಣ, ಬನಶಂಕರಿ 6ನೇ ಹಂತದ 10ನೇ ಬ್ಲಾಕ್‌ನ ಕನಕಭವನದ ಹಿಂಭಾಗದಲ್ಲಿರುವ ಉದ್ಯಾನವನ, ಹಾಗೂ 5ನೇ ಬ್ಲಾಕ್ ಶ್ರೀ ಕೃಷ್ಣ ದೇವಸ್ಥಾನದ ಪಕ್ಕದ ಆವರಣದಲ್ಲಿ ನಡೆದವು.

**ಇತರ ಚಟುವಟಿಕೆಗಳು:** ಅದಮ್ಯ ಚೇತನವು ಭಗವದ್ಗೀತಾ ಪಠಣ, ಶ್ರೀಚೇತನ ಸಭೆ, ಇಕೋ ಅಂಗಡಿ, 40 ಕಡೆ ಪ್ಲೇಟ್ ಬ್ಯಾಂಕ್, 10 ಕೇಂದ್ರಗಳಿಂದ ಉಚಿತ ಭೋಜನ ವಿತರಣೆ ಮುಂತಾದ ಕಾರ್ಯಕ್ರಮಗಳನ್ನು ನಿಯಮಿತವಾಗಿ ನಡೆಸಿಕೊಂಡು ಬರುತ್ತಿದೆ.

## ಇಸ್ರೇಲ್‌ಗೆ ಭಾರತದ ನಾಯಕತ್ವ ನಿಯೋಗ — ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರಿಗೆ ಆಹ್ವಾನ

"ಸಾಮಾಜಿಕ ಸಮಾವೇಶ ಮತ್ತು ನಾವೀನ್ಯತೆ" (Social Inclusion & Innovation) ವಿಷಯದ ಕುರಿತ ಭಾರತ-ಇಸ್ರೇಲ್ ನಾಯಕತ್ವ ನಿಯೋಗದಲ್ಲಿ ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಭಾಗವಹಿಸಲಿದ್ದಾರೆ. ಆಗಸ್ಟ್ 22ರಂದು ನಿಯೋಗವು ಇಸ್ರೇಲ್‌ಗೆ ಪ್ರಯಾಣ ಬೆಳೆಸಲಿದೆ.

ದೇಶದ ವಿವಿಧ ಭಾಗಗಳಿಂದ ಆಯ್ಕೆಯಾದ ಸ್ವಯಂಸೇವಾ ಸಂಸ್ಥೆಗಳ, ಶಿಕ್ಷಣ ಹಾಗೂ ಸಾಮಾಜಿಕ ಕ್ಷೇತ್ರದ ಗಣ್ಯರು ಈ ನಿಯೋಗದಲ್ಲಿದ್ದಾರೆ. ಭಾರತೀಯ ಸ್ತ್ರೀ ಶಕ್ತಿಯ ಅಖಿಲ ಭಾರತ ಸಂಘಟನಾ ಕಾರ್ಯದರ್ಶಿ ಶ್ರೀಮತಿ ನಯನಾ ಸಹಸ್ರಬುದ್ಧೆ, ಅಜೀಂ ಪ್ರೇಮ್‌ಜಿ ಫೌಂಡೇಶನ್‌ನ ಉಪಾಧ್ಯಕ್ಷೆ ಶ್ರೀಮತಿ ಶ್ವೇತಾ ಗುಪ್ತಾ, ಸೆಲ್ಕೊ ಮೊದಲಾದ ಸಂಸ್ಥೆಗಳ ಮುಖ್ಯಸ್ಥರು ಸೇರಿದಂತೆ ಒಟ್ಟು ಹದಿನಾಲ್ಕು ಮಂದಿ ಪ್ರತಿನಿಧಿಗಳು ಇದರಲ್ಲಿ ಪಾಲ್ಗೊಳ್ಳಲಿದ್ದಾರೆ.

ಮಹಿಳಾ ಸಬಲೀಕರಣ, ಕೌಶಲ್ಯ ತರಬೇತಿ, ಸುಸ್ಥಿರ ತಂತ್ರಜ್ಞಾನ ಹಾಗೂ ಸಮುದಾಯ ಆಧಾರಿತ ನಾವೀನ್ಯತೆಯ ಕ್ಷೇತ್ರಗಳಲ್ಲಿ ಇಸ್ರೇಲ್ ದೇಶದ ಅನುಭವಗಳನ್ನು ಅಧ್ಯಯನ ಮಾಡುವುದು ಹಾಗೂ ಉಭಯ ದೇಶಗಳ ನಡುವೆ ಸಹಯೋಗದ ಸಾಧ್ಯತೆಗಳನ್ನು ಬೆಳೆಸುವುದು ಈ ಪ್ರವಾಸದ ಉದ್ದೇಶ.ಅದಮ್ಯ ಚೇತನ ಸಂಸ್ಥೆಯು ಕಳೆದ ಎರಡು ದಶಕಗಳಿಂದ ಅನ್ನ, ಅಕ್ಷರ, ಆರೋಗ್ಯ ಮತ್ತು ಪರಿಸರ ಕ್ಷೇತ್ರಗಳಲ್ಲಿ ಸಲ್ಲಿಸುತ್ತಿರುವ ಸೇವೆಗೆ ಈ ಆಹ್ವಾನವು ದೊರೆತ ಮತ್ತೊಂದು ಗೌರವವಾಗಿದೆ.

## ಆಗಸ್ಟ್ ತಿಂಗಳ ಅನಂತ ಚೇತನ ಮಕ್ಕಳ ಗೋಡೆ ಪತ್ರಿಕೆ




ಅನಂತಪಥ
Published by: Tejaswini Ananthkumar
Inputs : | T S Gopal | Poornaprajna| Trivikram Joshi
ACknowldegements: Nayana S
For-Ananthkumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 | Email: ananth.path@akp.org.in

ಸ್ಪಷ್ಟನೆ: ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು: ಈ ಪತ್ರ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.

# ಅದಮ್ಯ ಸೇವಾ ( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )







ಆಗಸ್ಟ್ 15ರಂದು ಅದಮ್ಯ ಚೇತನದಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಯಿತು.

ರಾಷ್ಟ್ರ ಸೇವಿಕಾ ಸಮಿತಿಯ ವತಿಯಿಂದ ಅದಮ್ಯ ಚೇತನದ ಸಭಾಂಗಣದಲ್ಲಿ ಗುರುಪೂರ್ಣಿಮೆಯನ್ನು ಆಚರಿಸಲಾಯಿತು.

ಹುಬ್ಬಳ್ಳಿಯ ಗುಡಿಸಾಗರ ನಾಗನೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಅದಮ್ಯ ಚೇತನ ಸಂಸ್ಥೆಯ ಕಾರ್ಯಚಟುವಟಿಕೆಗಳ ಬಗ್ಗೆ ತಿಳಿಸಲಾಯಿತು







ಅದಮ್ಯ ಚೇತನ ಸಂಸ್ಥೆಯ ವತಿಯಿಂದ ಎಲ್ಲಾ ಕೇಂದ್ರಗಳ ಮೂಲಕ ಅಗತ್ಯವಿರುವ ಜನರಿಗೆ ನಿತ್ಯ ಉಚಿತ ಅನ್ನದಾನ ಸೇವೆ ನಿರಂತರವಾಗಿ ನಡೆಯುತ್ತಿದೆ.





ವಿಜಯಪುರದಲ್ಲಿ ಅದಮ್ಯ ಚೇತನದ ನೇತೃತ್ವದಲ್ಲಿ ಸಮಾಜಮುಖಿ ಮಹಿಳಾ ಮಂಡಳಿ ಬಳಗ, ಗಾಯತ್ರಿ ಸ್ವಸಹಾಯ ಮಹಿಳಾ ಬಳಗ ಹಾಗೂ ಆದ್ಯ ಟ್ರಸ್ಟ್ ವತಿಯಿಂದ ನಗರದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಘಟಕ 3ರಲ್ಲಿ 18ನೇ ಹಸಿರು ಭಾನುವಾರ ಸಸಿ ನೆಡುವ ಕಾರ್ಯಕ್ರಮ ನಡೆಯಿತು.

ಅದಮ್ಯ ಚೇತನದ ಹಸಿರು ಭಾನುವಾರ ಯೋಜನೆಯಡಿ ಬೆಂಗಳೂರಿನ ವಿವಿಧ ಭಾಗಗಳಲ್ಲಿ ಪ್ರತಿ ಭಾನುವಾರ ಸಸಿ ನೆಡುವ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯುತ್ತಿವೆ.